ಜನಪದ ವಿಚಾರ

ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ಜುಲೈ -೨೦೧೭ ಸಂಚಿಕೆ - ೧೨

ಇಸ್ರೋ ಸಾಧನೆ;
ಒಂದು ಮುಕ್ತ ಚಿಂತನೆ

*

ಮರಗಳನ್ನು ಅಪ್ಪಿಕೊಳ್ಳುವುದು

*

ಚಿಂತನೆಗಳು

ಕತ್ತಲೆ ಎಂಬುದು ಇತ್ತಲೆ
ಆಕಾಶದಲ್ಲಿ ಶ್ರೀಕೃಷ್ಣ ದರ್ಶನ
ಅಹಂಕಾರವೇ ಅಜ್ಞಾನ

ಜನಪದ ವಿಚಾರದಲ್ಲಿ

ಜುಲೈ- ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜುಲೈ- ೨೦೧೬
ಸಂಪುಟ - ೧೭
ಸಂಚಿಕೆ - ೧೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email : janapada@yahoo.com
Web: janapada.org

ಬಿಂದು

ಘೋರ ಸಾಗದಲೆಯಲಿ
ಭೋರ್ಗರೆವ ನೀರಿನಾ ಸದ್ದಿನಲಿ
ತೋರುತಿಹ ಭೂಮಿತಾಯ್ ಪಾದದಲಿ
ನೊರೆಮಾಲೆಯನರ್ಪಿಸುವಲ್ಲಿ
ನಾನೊಂದು ಬಿಂದು ಅಲ್ಲಿ

ಉಗಿಯಾಗಿ ಮೇಲೆ ಮೇಲೆ ಮುತ್ತುವಲ್ಲಿ
ಗಗನದಲಿಹ ಕರಿ ಮೋಡದಲ್ಲಿ
ಸಾಗುವ ಗಾಳಿಯ ತಂಪು ತಾಗುವಲ್ಲಿ
ನಗುತ ಸುರಿವ ಮಳೆಹನಿಯಲ್ಲಿ
ನಾನೊಂದು ಬಿಂದು ಅಲ್ಲಿ

ಕೋಟಿ ಕೋಟಿ ಜನಸಮುದಾಯದಲಿ
ಕೋಟಿ ಕೋಟಿ ಬುದ್ಧಿ ಜೀವಿಗಳಲ್ಲಿ
ಸಾಟಿಯಿಲ್ಲದವರುಂಟು ಕಲೆಗಳಲಿ
ಕುಟಿಲವಿಲ್ಲದ ಸಜ್ಜನರ ಸಂಗವಿರುವಲ್ಲಿ
ನಾನೊಂದು ಬಿಂದು ಅಲ್ಲಿ

ಆಗಸದಂಗಳದಿ ಚುಕ್ಕಿಯ ರಂಗವಲ್ಲಿ
ಸೊಗಯಿಸುವ ತಿಂಗಳನ ಬೆಳಕಲ್ಲಿ
ಮೊಗದಲಿ ಹರ್ಷದುಂಬಿದ ಚಕೋರವಲ್ಲಿ
ಕೂಗುವ ಮೌನರಾಗ ಲಹರಿಯಲಿ
ನಾನೊಂದು ಬಿಂದು ಅಲ್ಲಿ

-ಇಂದಿರಾ ಪಾಟೀಲ

ಚಿಂತನೆಗೊಂದು ಸಂಗತಿ

ಸಂತೋಷದ ಅಳತೆಗೋಲು

ದೇಶದಲ್ಲಿ ಇತ್ತೀಚೆಗೆ ಸಾಮಾಜಿಕ ಬೆಳವಣಿಗೆಯೊಂದು ಜನ್ಮ ತಾಳಿದೆ. ಮಧ್ಯಪ್ರದೇಶ ಸರ್ಕಾರವು "ಸಂತೋಷದ ಅಳತೆಗೋಲ"ನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದೆ. ಇಂಥ ಪ್ರಯತ್ನ ಭೂತಾನ್‌ನಲ್ಲಿ ಆಗಿ ಆ ಪ್ರಯತ್ನದ ಬಗ್ಗೆ ಚರ್ಚೆ ನಡೆಯುತ್ತಲೇ ಇದೆ. ಭೂತಾನ ಸರ್ಕಾರದ ಆ ಪ್ರಯತ್ನದಿಂದ ಪ್ರಭಾವಿತರಾಗಿ ಮಧ್ಯಪ್ರದೇಶದ ಮುಖ್ಯಮಂತ್ರಿ ಈ ಸಾಹಸಕ್ಕೆ ಇಳಿದಿದ್ದಾರೆಂದು ಅನಿಸುತ್ತದೆ. ಮನುಷ್ಯರ ಸಂತೋಷದ ಅಳತೆಗೋಲು ವ್ಯವಹಾರಿಕ ರೂಪದಲ್ಲಿ ದೊರೆಯುವುದಾದರೆ ನಿಜವಾಗಿಯೂ ಅದೊಂದು ಮಹಾ ಸಾಧನೆಯೆ ತಿಳಿಯಬಹುದು. ಆ ರಾಜ್ಯದ ವಿಶಿಷ್ಟ ಪ್ರಯತ್ನ ಕೊಂಚಾದರು ಸಫಲವಾದಲ್ಲಿ ಇತರ ರಾಜ್ಯ ಸರ್ಕಾರಗಳೂ ಇಂಥ ಪ್ರಯತ್ನಕ್ಕೆ ತೊಡಗಬಹುದು. ಮಧ್ಯಪ್ರದೇಶದ ಈ ಪ್ರಯತ್ನದಲ್ಲಿರುವ ವಿಪರ್ಯಾಸವೆನೆಂದರೆ ಸಂತೋಷದ ಅಳತೆಗೋಲನ್ನು ಶೋಧಿಸಿ ಕಂಡುಹಿಡಿಯುವ ಕೆಲಸವನ್ನು ಖರಗಪೂರ್, ಐಟಿಐ, ಸಂಸ್ಥೆಗೆ ವಹಿಸಿಕೊಟ್ಟಿರುವುದು! ಎಲ್ಲರಿಗೂ ತಿಳಿದಿರುವಂತೆ ದೇಶದಲ್ಲಿರುವ ಎಲ್ಲ ತಾಂತ್ರಿಕ ಕಾಲೇಜುಗಳು ಭೌತಿಕ ಜೀವನಕ್ಕೆ ಬೇಕಾಗುವ ಸಂತೋಷವನ್ನು ಹೆಚ್ಚಿಸುವ ಸಾಧನಗಳನ್ನು ಶೋಧಿಸುವುದರಲ್ಲಿ ತೊಡಗಿವೆಯೇ ಹೊರತು ಜೀವನದ ಇನ್ನೊಂದು ಪಾರ್ಶ್ವವಾದ ಆಧ್ಯಾತ್ಮಿಕ ಕ್ಷೇತ್ರದ ವಿಚಾರಗಳನ್ನು ಉದಾಸೀನ ಮಾಡಿವೆ. ಎಲ್ಲಿಯವರೆಗೆ ಭೌತಿಕ ಜೀವನದ ಸಂತೋಷವೇ ಎಲ್ಲ ಸರ್ಕಾರಗಳ ಮುಖ್ಯ ಉದ್ದೇಶವಾಗಿರುತ್ತದೊ ಅಲ್ಲಿಯವರೆಗೆ ನಿಜ ಸಂತೋಷದ ಅಳತೆಗೋಳು ಸಿಗಲು ಸಾಧ್ಯವಿಲ್ಲ. ವಿಶ್ವರಾಷ್ಟ್ರ ಸಂಸ್ಥೆಯು ೨೦೧೬ರಲ್ಲಿ ಜಾಗತಿಕ ಸಂತೋಷ ವರದಿಯನ್ನು ತಯಾರಿಸಿದಾಗ ಭಾರತದ ಸ್ಥಾನ ೧೧೮ನೇದ್ದಾಗಿತ್ತು. ಮುಂದೆ ೨೦೧೭ ನೇ ಇಸವಿಯ ವರದಿಯಲ್ಲಿ ಭಾರತದ ಸ್ಥಾನ ೧೨೨ನೇದ್ದಾಯಿತು. ಕೇವಲ ಒಂದು ವರ್ಷದ ಭೌತಿಕ ಅಭಿವೃದ್ಧಿ ದೇಶದ ಸಂತೋಷದ ಸ್ಥಾನವನ್ನು ಕಡಿಮೆ ಮಾಡಿತು. ಅಂದ ಮೇಲೆ ಸತತವಾಗಿ ನಡೆಯುವ ಭೌತಿಕ ಅಭಿವೃದ್ಧಿಯ ಕಾರ್ಯಕ್ರಮಗಳಿಂದ ಮನುಷ್ಯರ ಸಂತೋಷವು ಗಗನ ಕುಸುಮವಾಗಿಯೆ ಉಳಿಯುತ್ತದೆ. ಈಗಿನ ನಮ್ಮ ಸಮಾಜದಲ್ಲಿ ಆಗುತ್ತಿರುವ ಅಸಂತೋಷದ ತಾಂಡವ ವೃತ್ಯವನ್ನು ನಾವು ನೋಡುತ್ತಿದ್ದೇವೆ. ದಿನ ಕಳೆದಂತೆ ಜೀವನ ಹೆಚ್ಚು ಹೆಚ್ಚು ಸಂಕೀರ್ಣವೂ, ಕ್ಲಿಷ್ಟಕರವೂ ಆಗುತ್ತಿವೆ. ಆತ್ಮಹತ್ಯೆಗಳು ದೈನಂದಿನ ಸಾಮಾನ್ಯ ಸಂಗತಿಗಳಾಗಿವೆ. ಮಾನವೀಯ ಅನುಕಂಪವೆಂಬುದೆ ಇಲ್ಲದಂತಾಗುತ್ತಿದೆ. ನೈಜ ಪರಿಸ್ಥಿತಿ ಹೀಗಿರುವಾಗ ಸರ್ಕಾರಗಳ ಸಂತೋಷದ ಅಳತೆಗೋಲನ್ನು ಹುಡುಕುವ ಪ್ರಯತ್ನ "ಗಾಳಿಯನ್ನು ಗುದ್ದಿ ಮೈ ನೋಯಿಸಿದಂತಾಗುತ್ತದೆ" ಎಂಬುದರಲ್ಲಿ ಸಂದೇಹವಿಲ್ಲ. ಸಂತೋಷವನ್ನು ಹೆಚ್ಚಿಸಲಾಗದಿದ್ದರೂ, ಅಸಂತೋಷ ಹೆಚ್ಚಾಗದಂತೆ ಮಾಡುವ ಪ್ರಯತ್ನದ ಅಂಗವಾಗಿ ವಿಜ್ಞಾನ ಮತ್ತು ಆತ್ಮಜ್ಞಾನಗಳ ಸಮನ್ವಯಗೊಳಿಸುವ ಪ್ರಯತ್ನ ಮಾಡುವುದು ಒಳ್ಳೆಯದಲ್ಲವೆ? ಈಗ ದೇಶದ ಪ್ರಗತಿಯನ್ನು ದೇಶದ ಒಟ್ಟು ಆಂತರಿಕ ಉತ್ಪಾದನೆ (ಜಿ.ಡಿ.ಪಿ) ಅನುಪಾತದ ಮೇಲೆ ಅಳೆಯುತ್ತದೆ. ಈ ಅಳತೆಗೋಲಲ್ಲಿ ಜನರ ಸಂತೋಷದ ಮಾಪನವೇ ಇರುವುದಿಲ್ಲ. ಆದ್ದರಿಂದ ಜಿ.ಡಿ.ಪಿ.ಯ ಜೊತೆಗೆ ದೇಶದ ಆಂತರಿಕ ಒಟ್ಟು ಸಂತೋಷ (ಜಿ.ಡಿ.ಪಿ) ಎಂಬ ಮಾಪನವನ್ನು ತರುವುದು ದೇಶಕ್ಕೂ ಮತ್ತು ಜನತೆಗೂ ಶ್ರೇಯಸ್ಕರ. ●

ಇಸ್ರೋ ಸಾಧನೆ; ಒಂದು ಮುಕ್ತ ಚಿಂತನೆ

– ಸುರೇಂದ್ರ ಕೌಲಗಿ

ಕೇವಲ ಐದು ತಿಂಗಳ ಅಂತರದಲ್ಲಿ ಬೆಂಗಳೂರಿನಲ್ಲಿರುವ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಾದ ಇಸ್ರೋ ಜಿ.ಎಸ್.ಎಲ್.ವಿ ಮಾರ್ಕ್–೩–ಡಿ ಎಂಬ ಸಂಕೇತದ ನಾಲ್ಕು ಟನ್ ಭಾರದ ಉಪಗ್ರಹವನ್ನು ಹಾರಿಸಿತು. ಐದು ತಿಂಗಳ ಹಿಂದಷ್ಟೆ ಫೆಬ್ರವರಿ ಮಾಹೆಯಲ್ಲಿ ಏಕಕಾಲಕ್ಕೆ ನೂರುನಾಲ್ಕು ಉಪಗ್ರಹಗಳನ್ನು ಹಾರಿಸಿ ಇತಿಹಾಸವನ್ನು ನಿರ್ಮಿಸಿತು. ಜೂನ್ ಆರರಂದು ಬೇರೊಂದು ರೀತಿಯ ಮಹತ್ತರವಾದ ಯಶಸ್ಸನ್ನು ಸಾಧಿಸಿ ವಿಶೇಷ ಮೆಚ್ಚುಗೆಯನ್ನು ಗಳಿಸಿದೆ. ಮೆಚ್ಚುಗೆಯ ಚಪ್ಪಾಳೆ ಸದ್ದು ಮುಗಿಯುವ ಮುನ್ನವೇ ಇಸ್ರೋ ಪಿ.ಎಸ್.ಎಲ್.ವಿ–ಸಿ–೩೮ ಎಂಬ ೭೨ ಕೆ.ಜಿ. ತೂಕದ ಕಾರ್ಟೋಸ್ಯಾಟ್–೨ ಎಂಬ ಸರಣಿ ಉಪಗ್ರಹಗಳನ್ನು ೨೩ ಜೂನ್ ರಂದು ೧೪ ದೇಶಗಳ ಪರವಾಗಿ ೨೯ ನ್ಯಾನೋ ಉಪಗ್ರಹಗಳನ್ನು ಹಾರಿಸಲಿದೆ.

ಇಸ್ರೋ ಜಿ.ಎಸ್.ಎಲ್.ವಿ ಮಾರ್ಕ್–೩–ಡಿ ನಾಲ್ಕು ಟನ್ ಭಾರಿ ತೂಕದ ಕ್ಷಿಪಣಿಯನ್ನು ಹಾರಿಸಿದ ದಿನ ವಿಶ್ವಪರಿಸರ ದಿನವಾಗಿತ್ತು. ಆ ದಿನ ಜಗತ್ತಿನಾದ್ಯಂತ ಎಲ್ಲ ದೇಶಗಳಲ್ಲಿಯ ಜನರು ತಮ್ಮ ತಮ್ಮ ರೀತಿಯಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಿದರು. ಪರಿಸರವನ್ನು ಹಾಳು ಮಾಡಬಾರದು; ಅದನ್ನು ಉಳಿಸಬೇಕು ಮತ್ತು ರಕ್ಷಿಸಬೇಕು ಎಂಬ ವಿಚಾರವನ್ನು ಮನನ ಮಾಡಿದರು. ಆದರೆ ಪರಿಸರ ಆಚರಣೆಯ ಆ ದಿನವೇ ಉಡ್ಡಯನ ಕಾರ್ಯಕ್ರಮವ ನಡೆಸಿ ಇಸ್ರೋ ಪರಿಸರ ರಕ್ಷಣೆ ಮಾಡಿತೊ, ರಕ್ಷಿಸಿತೊ ಅಥವಾ ನಾಶ ಮಾಡುವತ್ತ ಹೆಜ್ಜೆ ಹಾಕಿತೊ ಎಂಬುದನ್ನು ಜನ ಸಾಮಾನ್ಯರು ತಿಳಿಯುವುದು ಕಷ್ಟವಾಗಿದೆ. ಪ್ಯಾರಿಸ್ ಹವಾಮಾನ ಬದಲಾವಣೆ ಒಪ್ಪಂದಕ್ಕೆ ಭಾರತ ರುಜು ಹಾಕಿದೆ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

ಇಸ್ರೋ, ನಾಸಾ, ಇಸಾ ಮತ್ತು ಇತರ ದೇಶಗಳ ಅಂತರಿಕ್ಷಯಾನ ಸಂಸ್ಥೆಗಳ ಸುತ್ತ ಗೌಪ್ಯತೆಯ ತೆರೆ ಇದೆ. ಆ ಪ್ರಯೋಗಗಳು ವಿಭಿನ್ನ ಉದ್ದೇಶಗಳಿಗಾಗಿ ಇರುತ್ತವೆ. ಆದರೆ ಅವು ಜನಸಾಮಾನ್ಯರ ಹಿತಕ್ಕೇ ಎಂದು ಹೇಳಲಾಗುತ್ತದೆ. ಪ್ರಯೋಗಕ್ಕಾಗಿ ಬಿಲಿಯನ್ ಗಟ್ಟಲೆ ಹಣವನ್ನು ಖರ್ಚುಮಾಡಲಾಗುತ್ತದೆ.

ಸೈನ್ಯ ಶಕ್ತಿಯ ಬಲವರ್ಧನೆಗಾಗಿ ಮತ್ತು ಸ್ವದೇಶದ ರಕ್ಷಣೆಗಾಗಿ ಹಾಗೂ ಶತ್ರು ದೇಶದ ಮೇಲೆ ದಾಳಿ ಮಾಡುವುದಕ್ಕಾಗಿಯೂ ಕೂಡ ಅಂತರಿಕ್ಷಜ್ಞಾನವನ್ನು

ಉಪಯೋಗಿಸಿಕೊಳ್ಳಲಾಗುವುದೆಂಬುದು ಬಹಿರಂಗ ಸತ್ಯವೇ ಆಗಿದೆ.

ಅಂತರಿಕ್ಷ ಬಹಳ ವಿಶಾಲವೂ, ಸಂಕೀರ್ಣವೂ ಆಗಿರುವುದರಿಂದ ಅಲ್ಲಿಯ ಅಗಣಿತ ಸಂಗತಿಗಳ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನಕ್ಕೆ ಎಲ್ಲ ದೇಶಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂಬ ಸಲಹೆಯೂ ಆಗಾಗ್ಗೆ ಕೇಳಿ ಬರುತ್ತದೆ. ಆ ವಿಚಾರಕ್ಕನುಗುಣವಾಗಿ ಈಗಾಗಲೆ ಅಂತರ್‌ರಾಷ್ಟ್ರೀಯವಾಗಿ ಕೆಲವು ಪ್ರಯತ್ನಗಳು ನಡೆದಿವೆ. ಅಮೇರಿಕಾ-ರಷ್ಯಾ-ಭಾರತ ಸೇರಿ ಅಂತರಿಕ್ಷಯಾನಗಳನ್ನು ಕೈಗೊಂಡಿವೆ. ಅಂತರಿಕ್ಷದಲ್ಲಿ ನಿಲ್ದಾಣಗಳನ್ನು ಕೂಡ ಮಾಡಿವೆ. ಅಂತರಿಕ್ಷದ ಶೋಧನಾ ಕೆಲಸ ನಿರಂತರವಾಗಿ ನಡೆಯುತ್ತಿದೆ. ಈ ಪ್ರಯತ್ನ ಮುಂದಿನ ಶತಮಾನಗಳಲ್ಲಿ ಇನ್ನೂ ಹೆಚ್ಚು ತೀವ್ರಗೊಳ್ಳುವ ಸಾಧ್ಯತೆ ಇದೆ. ಇಸ್ರೋದ ಅಧ್ಯಕ್ಷರಾಗಿರುವ ಕಿರಣ್‌ಕುಮಾರ್‌ರವರ ಪ್ರಕಾರ "ಭಾರತ ದೇಶ ಅಂತರಿಕ್ಷದಲ್ಲಿ ಗಣನೀಯ ಕಡಿಮೆ ಸಂಖ್ಯೆಯಲ್ಲಿ ಗಗನ ನೌಕೆಗಳನ್ನು ಹೊಂದಿದೆ. ಆ ಸಂಖ್ಯೆಯನ್ನು ದ್ವಿಗುಣಗೊಳಿಸಬೇಕಾದರೆ ಅನೇಕ ಉಡಾವಣೆಗಳನ್ನು ಮಾಡಬೇಕಾಗುತ್ತದೆ. ಅಲ್ಲದೆ ಹೊಸ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಮತ್ತು ಸತತವಾಗಿ ಹೊಸ ಕೌಶಲ್ಯಗಳನ್ನು ಪಡೆಯಲು ಸಂಕೀರ್ಣವಾದಂತಹ ಪ್ರಯೋಗಗಳನ್ನೂ ಮಾಡಬೇಕಾಗುತ್ತದೆ" ಇಂಥದೇ ಚಿಂತನೆ ಬೇರೆ ದೇಶಗಳ ಅಂತರಿಕ್ಷ ಸಂಸ್ಥೆಗಳದೂ ಆಗಿರುತ್ತದೆ. ಆದ್ದರಿಂದ ಅಂತರಿಕ್ಷ ಸಂಶೋಧನೆಗಳು ಎಡಬಿಡದೆ ನಡೆಯುತ್ತಲೇ ಇರುತ್ತವೆ. ವಿಜ್ಞಾನ ಒಂದು ಅನಂತ ಪ್ರಕ್ರಿಯೆ. ಅದು ಎಂದೂ "ಇಷ್ಟೇ ಸಾಕು ಖಿಹಾ ಜಿಚಿಡಿ ಚಿಟಿಜ ಟಿಂ ಜಿಣಡಿಣುಜಡಿ" ಎಂಬುದಾಗಿ ಹೇಳುವುದಿಲ್ಲ. ಒಂದೇ ಅಂಶ ತಿಳಿದಿದ್ದೇನೆ ಎಂದು ಹೇಳುತ್ತದೆ. ಇಂಥ ಅನಂತ ವಿಜ್ಞಾನದ ಕೂಸಾದ ತಂತ್ರಜ್ಞಾನವು ಬೆಳೆಯುತ್ತಲೇ ಹೋಗುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ಎಷ್ಟೊಂದು ಬೆಳೆದಿವೆ ಎಂದರೆ ಅವುಗಳನ್ನು ಶೋಧಿಸಿದ ಮನುಷ್ಯನೇ ಅವುಗಳ ಕೈಗೊಂಬೆಯಾಗಿದ್ದಾನೆ.

ರೇಷ್ಮೆಹುಳು ತನ್ನ ಸುತ್ತ ಗೂಡುರಚಿಸಿಕೊಂಡು ತಾನು ಅದರೊಳಗೆ ಬಂಧಿಯಾಗುವಂತೆ ಮನುಷ್ಯ ಈಗ ಅವುಗಳ ಬಂಧಿಯಾಗಿದ್ದಾನೆ. ಹೊರಗೆ ಬರಲಾರದ ಸ್ಥಿತಿಯಲ್ಲಿ ಸಿಲುಕಿಕೊಂಡಿದ್ದಾನೆ. ಈಗ ಜನಸಾಮಾನ್ಯರ ಮುಂದೆ ಇರುವ ಪ್ರಶ್ನೆ ಬಹಳ ಸರಳವಾದುದು. ಈಗ ನಡೆಯುತ್ತಿರುವ ಅಂತರಿಕ್ಷ ಪ್ರಂಯೋಗಗಳಿಂದ ಭೂಮಿಯು ಮೇಲಿರುವ ಜನರ ಸಂಕಷ್ಟಗಳು ಕಡಿಮೆಯಾಗಿವೆಯೇ ಮತ್ತು ಅವುಗಳಿಂದ ಯಾವ ಉಪಕಾರಗಳಾಗುತ್ತಿವೆ ಎಂಬುದು. ನಮಗೆ ಗೊತ್ತಿರುವ ಸಾಮಾನ್ಯ ಲೆಕ್ಕದ ಪ್ರಕಾರ ಇಸ್ರೋ ಕಳೆದ

ಐದು ತಿಂಗಳಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿವೆ. ಜೂನ್ ಐದರಂದು ಹಾರಿಸಿದ ಜಿ.ಎಸ್.ಎಲ್.ವಿ ಮಾರ್ಕ್-೩-ಡಿ ರಾಕೇಟ್ ನಿರ್ಮಿಸಲು ಮುನ್ನೂರು ಕೋಟಿ ರೂಪಾಯಿ ಖರ್ಚಾಗಿದೆ. ಉಪಗ್ರಹವನ್ನು ಅಂತರಿಕ್ಷಕ್ಕೆ ಸೇರಿಸಿದ ನಂತರ ರಾಕೆಟ್ ಧರೆಗೆ ಹಿಂದಿರುವಾಗ ಸುಟ್ಟು ಹೋಗುತ್ತಾದ್ದರಿಂದ ಅದರ ಮರು ಉಪಯೋಗ ಸಾಧ್ಯವೇ ಆಗುವುದಿಲ್ಲ. ಅಂದರೆ ಮುನ್ನೂರು ಕೋಟಿ ರೂಪಾಯಿ ಬೂದಿಯಾದಂತೆ. ಇದೇ ರೀತಿ ಕೋಟಿಕೋಟಿ ಹಣ ಬೂದಿಯಾಗುತ್ತಿರುವ ಸಂಗತಿ ಉಪಗ್ರಹಗಳನ್ನು ರಾಕೆಟ್ ಮೂಲಕ ಇಸ್ರೋ ಉಡಾವಣೆ ಮಾಡಲಾರಂಭಿಸಿದಾಗಿನಿಂದ ನಡೆಯುತ್ತಲೆ ಇದೆ. ಇದುವರೆಗೆ ಎಷ್ಟು ಕೋಟಿ ಹಣ ಬೂದಿಯಾಗಿದೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಇಸ್ರೊ ತನ್ನ ಈ ಸಾಧನೆಯ ನಂತರ ಸರ್ಕಾರದಿಂದ ಹನ್ನೆರಡು ಸಾವಿರದ ಐದು ನೂರು ಕೋಟಿ ರೂಪಾಯಿಗೆ ಬೇಡಿಕೆ ಇಟ್ಟಿದೆ! ಈ ಬೇಡಿಕೆಯ ಹಿಂದೆ ಇರುವ ಉದ್ದೇಶ ಅಂತರಿಕ್ಷದಲ್ಲಿ ಮಾನವನನ್ನು ಇರಿಸುವುದೇ ಆಗಿದೆ. ಇದು ಕೈಗೂಡಲು ಏಳು ವರ್ಷಗಳು ಬೇಕಾಗಬಹುದು. ಹೀಗೆ ಇಸ್ರೋದಂತಹ ಇತರ ದೇಶಗಳ ಬಾಹ್ಯಾಕಾಶ ಸಂಸ್ಥೆಗಳೂ ಹಣವನ್ನು ಧ್ವಂಸ ಮಾಡುತ್ತಿರುವುದನ್ನು ನೋಡಿದರೆ ಗಾಬರಿಯಾಗುತ್ತದೆ.

ಮಂಗಳಲೋಕಕ್ಕೆ ನಾಲ್ಕುನೂರು ಕೋಟಿ ರೂಪಾಯಿ ಖರ್ಚುಮಾಡಿ ಇಸ್ರೋ ಕಳುಹಿಸಿದ ಮಂಗಳ ಉಪಗ್ರಹ ಮಂಗಳಗ್ರಹ ತಲುಪಿ ಎರಡು ವರ್ಷವಾಯಿತು. ಉಪಗ್ರಹದಿಂದ ಬಂದ ವೈಜ್ಞಾನಿಕ ಮಾಹಿತಿಯ ವಿಶ್ಲೇಷಣೆ ಈಗ ನಡೆದಿದೆ. ವೈಜ್ಞಾನಿಕ ವಿಶ್ಲೇಷಣೆಯ ಪರಿಣಾಮಗಳು ಜಾರಿಗೆ ಬಂದು ಭೂಲೋಕಕ್ಕೆ ಉಪಯೋಗವಾಗುವುದು ಯಾವಾಗ?

ಇಂದಿನ ಅತೀ ದೊಡ್ಡ ಜಾಗತಿಕ ಸವಾಲು ಹವಾಮಾನದಲ್ಲಿಯ ಬದಲಾವಣೆ ಮತ್ತು ತಾಪಮಾನದಲ್ಲಿಯ ಹೆಚ್ಚಳ. ಇದರ ಪರಿಣಾಮ ಜನಜೀವನ, ಆರ್ಥಿಕ ವ್ಯವಹಾರ, ಮತ್ತು ರಾಜಕಾರಣದ ಮೇಲೂ ಉಂಟಾಗುತ್ತಿದೆ. ಒಟ್ಟಾರೆ ಮನುಕುಲ ಬದುಕಿ ಉಳಿಯುವುದಕ್ಕೆ ಸಾಧ್ಯವಿಲ್ಲದಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ನೂರು ವರ್ಷಗಳ ಒಳಗೆ ಬೇರೆ ಗ್ರಹ ಒಂದಕ್ಕೆ ಮನುಷ್ಯ ವಲಸೆ ಹೋಗುವುದು ಅನಿವಾರ್ಯವಾಗುತ್ತದೆಂದು ಭೌತಶಾಸ್ತ್ರಜ್ಞ ಟೀಪನ್-ಹಾಕಿಂಗ್ ಅಭಿಪ್ರಾಯಪಡುತ್ತಾರೆ. ಇಂಥ ಕಠಿಣ ಪರಿಸ್ಥಿತಿ ಭೂ ಲೋಕಕ್ಕೆ ಬರದಂತೆ ಮಾಡಬೇಕಾಗಿದ್ದ ಅಂತರಿಕ್ಷ ಸಂಶೋಧನಾ ಸಂಸ್ಥೆಗಳು ಅಂಥ ಪ್ರಯತ್ನ ಮಾಡದೇ ಬೇರೆ ಲೋಕಕ್ಕೆ ಹೋಗುವ ಸಾಧ್ಯತೆಯ ಬಗ್ಗೆ ಪ್ರಯತ್ನ

ಮಾಡುತ್ತಿರುವುದು ತಪ್ಪು ಹೆಜ್ಜೆ ಎಂದು ಅನಿಸುವುದಿಲ್ಲವೆ? ಮನುಷ್ಯನ ಕೈಗೆ ವಿಜ್ಞಾನ ದಕ್ಕಿದೆ ಮತ್ತು ಅದರ ಪ್ರಯೋಗಾರ್ಥವಾಗಿ ಭೂಮಿ ಮತ್ತು ಅಂತರಿಕ್ಷಗಳು ದೊರೆತಿವೆ. ಜಗತ್ತಿನ ಎಲ್ಲ ಸರ್ಕಾರಗಳು ವಿಜ್ಞಾನದ ಹಾರುಗುದುರೆಯನ್ನು ಏರಿ ಹೊರಟಿರುವುದರಿಂದ ಇಡಿ ಮನು ಮತ್ತು ಪ್ರಾಣಿ ಸಂಕುಲ ಜೀವನ್ಮರಣದ ತೂಗೂಯ್ಯಾಲೆಯಲ್ಲಿದೆ. ಅಂತರಿಕ್ಷ ಜಗತ್ತಿನ ಸಂಶೋಧನಾ ಕಾರ್ಯ ಪಾಶ್ಚಿಮಾತ್ಯರಿಂದ ಬಂದುದಾಗಿದೆ. ವಿವಿಧ ಪ್ರಯೋಗಗಳನ್ನು ಮಾಡುವುದು, ವಿವಿಧ ವಿಷಯಗಳಲ್ಲಿ ಪ್ರವೇಶ ಮಾಡುವುದು. ಮುಂತಾದವನ್ನು ಪಾಶ್ಚಿಮಾತ್ಯ ವಿಜ್ಞಾನಿಗಳು ಚೆನ್ನಾಗಿ ಮಾಡುತ್ತಲೇ ಬಂದಿದ್ದಾರೆ. ಆದರೆ ಭಾರತದಂಥ ದೇಶ ವಿವಿಧ ವಿಷಯಗಳನ್ನು ಕ್ರೋಢೀಕರಿಸಿ ಸಮಾಜೋಪಯೋಗಿ ಕೆಲಸವನ್ನು ಮಾಡಬೇಕಿದೆ. ಅಂಥ ಕೆಲಸವನ್ನೇನಾದರೂ ಇಸ್ರೋ ಮಾಡಿದಲ್ಲಿ ಅದೊಂದು ವಿಶಿಷ್ಟ ಸಾಧನೆಯಾಗಬಹುದು.

ಮನುಷ್ಯನ ಬುದ್ಧಿ ಶಕ್ತಿಗೆ ಕಡಿವಾಣ ಹಾಕುವುದು ತರವಲ್ಲ ಎಂಬ ಅಭಿಪ್ರಾಯ ಇದೆಯಾದರೂ ಅವನ ಬುದ್ಧಿಯ ಉಪಯೋಗದ ಬಗ್ಗೆ ಸಂಗತ ಮತ್ತು ಅಸಂಗತಗಳ ಪ್ರಶ್ನೆ ಇದೆಯಲ್ಲವೆ? ಒಟ್ಟಾರೆ ವಿಜ್ಞಾನ ಮತ್ತು ತಂತ್ರಜ್ಞಾನದ ಮುನ್ನಡೆಯ ಬಗ್ಗೆ ವಿಜ್ಞಾನಿಗಳೆಲ್ಲರನ್ನು ಒಳಗೊಂಡಂತೆ ಎಲ್ಲ ಬುದ್ಧಿ ಜೀವಿಗಳು ಮುಕ್ತ ಚಿಂತನೆ ಮಾಡುವ ಅಗತ್ಯವಿದೆ. "ಸಂಶೋಧನೆಗೆ ನನ್ನ ವಿರೋಧವಿಲ್ಲ. ಸಂಶೋಧನೆಗಳ ಹುಚ್ಚಿಗೆ ನನ್ನ ವಿರೋಧವಿದೆ" ಎಂಬ ಗಾಂಧೀಜಿಯವರ ವಿಚಾರವನ್ನು ಗಮನಿಸುವುದು ಅಗತ್ಯವಾಗಿದೆ. ಅಂತೆಯೇ "ಮಾನವ ಜನ್ಮ ದೊಡ್ಡದು ಅದನ್ನು ಹಾನಿಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ" ಎಂಬ ದಾಸರ ವಾಣಿಯೂ ಗಮನದಲ್ಲಿರಬೇಕಲ್ಲವೆ?

●

> ಜ್ಞಾನವು ವಾದ ಮತ್ತು ವಿವಾದಗಳಿಂದ ಪ್ರಾಪ್ತವಾಗುವುದಿಲ್ಲ. ಈಶ್ವರನ ಕೃಪೆಯಿಂದ ದೊರೆಯುತ್ತದೆ. ಈಶ್ವರ ಕೃಪೆ ಭಕ್ತಿ ಭಾವದಿಂದ ಮತ್ತು ಸೇವೆಯಿಂದ ಪ್ರಾಪ್ತವಾಗುತ್ತದೆ. ಕ್ಷಣ ಕ್ಷಣವು ಚಾರಿತ್ರ್ಯವನ್ನು ಉಜ್ವಲ ಮಾಡುವಂಥ ಸತತ ಜಾಗೃತಿ, ಇಂದ್ರಿಯನಿಗ್ರಹ ಮತ್ತು ಸೇವಾ ಕಾರ್ಯದಲ್ಲಿ ಏಕಾಗ್ರತೆ ಇದು ಉಪಾಯ.
>
> –ವಿನೋಬಾ

ಮರಗಳನ್ನು ಅಪ್ಪಿಕೊಳ್ಳುವುದು

ಮೂಲ –ಜಾರ್ಜ್ ಆಲ್ಫ್ರೆಡ್ ಜೇಮ್ಸ್
ಅನು: ಸುರೇಂದ್ರ ಕೌಲಗಿ

[ದೇಶದ ಹಿರಿಯ ಕ್ರಿಯಾತ್ಮಕ ಪರಿಸರ ವಾದಿ ಸುಂದರ್‌ಲಾಲ್ ಬಹುಗುಣರವರನ್ನು ಕುರಿತು ಅಮೇರಿಕಾದ ಜಾರ್ಜ್ ಆಲ್ಫ್ರೆಡ್ ಜೇಮ್ಸ್ ಅವರು ಬರೆದಿರುವ ಪುಸ್ತಕದ ಮೊದಲಿನ ೫ ಅಧ್ಯಾಯಗಳ ಅನುವಾದ ೨೦೧೦ ಮೇ ತಿಂಗಳ ಜನಪದ ವಿಚಾರದ ೧೦ನೇ ಸಂಪುಟ ೧೦ನೇ ಸಂಚಿಕೆಯಿಂದ ಪ್ರಾರಂಭವಾಗಿ ೨೦೧೨ ಫೇಬ್ರವರಿ ಸಂಪುಟ ೧೨, ಸಂಚಿಕೆ ೭ ರಂದು ನಿಂತಿದೆ. ಮುಂದಿನ ಭಾಗದ ಅನುವಾದವನ್ನು ಕ್ರಮಶಃ ಪ್ರಕಟಿಸಲಾಗುತ್ತದೆ.–ಸಂ...]

ಸುಂದರ್‌ಲಾಲ್ ಬಹುಗುಣರ ಹೆಸರು ಚಿಪ್ಕೋ ಆಂದೋಲನಕ್ಕೆ ಪರ್ಯಾಯವಾಗಿದೆ. ಈ ಚಳುವಳಿ ೧೯೭೩ ರಿಂದ ಅಂತರ್‌ರಾಷ್ಟ್ರೀಯ ಗಮನ ಸೆಳೆಯಲು ಪ್ರಾರಂಭಿಸಿತು. ಇಂದಿರಾಗಾಂಧಿಯವರೊಂದಿಗೆ ನಡೆದ ಸಂಭಾಷಣೆಯ ಸಂದರ್ಭದಲ್ಲಿ ಇಂದಿರಾರವರು ಸುಂದರ್‌ಲಾಲರನ್ನು ಚಿಪ್ಕೊ ಬಹುಗುಣ ಎಂದು ಕರೆದರು. ಇದಕ್ಕೆ ಕಾರಣ ಉತ್ತರಪ್ರದೇಶದ ಆಗಿನ ಮುಖ್ಯಮಂತ್ರಿಯಾಗಿದ್ದ ಎಚ್. ಎನ್. ಬಹುಗುಣ ಎಂಬ ವ್ಯಕ್ತಿಯ ಹೆಸರಿನಿಂದ ಬೇರ್ಪಡಿಸಲು ಇಂದಿರಾಗಾಂಧಿ ಆ ರೀತಿ ಸುಂದರ್‌ಲಾಲ್‌ಬಹುಗುಣರನ್ನು ಕರೆದಿದ್ದರು. ಚಿಪ್ಕೊ ಆಂದೋಲನದ ಪ್ರಭಾವಳಿಯ ಕಾರಣದಿಂದಾಗಿ ಬಹುಗುಣರವರು ಜಗತ್ತಿನಾದ್ಯಂತ ಕ್ರಿಯಾಶೀಲ ಪರಿಸರವಾದಿಯೆಂದು ಪ್ರಸಿದ್ಧರಾದರು. ಚಿಪ್ಕೊ ಆಂದೋಲನದ ಸಂದೇಶದೊಂದಿಗೆ ಅವರು ಯುರೋಪ್, ಆಫ್ರಿಕಾ ಮತ್ತು ಅಮೇರಿಕಾದಲ್ಲಿ ಪ್ರವಾಸ ಮಾಡಿದರು. ಕೆಲವು ಲೇಖನಗಳಲ್ಲಿ ಸುಂದರ್‌ಲಾಲ್‌ರವರನ್ನು ಚಿಪ್ಕೊ ಆಂದೋಲನದ ಸಂಸ್ಥಾಪಕರೆಂದಾಗಲೀ ಅಥವಾ ನಾಯಕರೆಂದಾಗಲೀ ಕರೆದಿದ್ದಾರೆ. ಆದರೆ ಸುಂದರ್‌ಲಾಲ್‌ರು ಈ ಎರಡೂ ವಿಶೇಷಣಗಳನ್ನು ನಿರಾಕರಿಸುತ್ತಾರೆ. ಕೆಲ ಸಂಶೋಧಕರ ಈ ಅಭಿಪ್ರಾಯದ ವಿರುದ್ಧ ಅವರು ಹೇಳುವುದೇನೆಂದರೆ ಚಿಪ್ಕೊ ಆಂದೋಲನ ಅರಣ್ಯದಲ್ಲಿರುವ ಮಹಿಳೆಯರದಾಗಿತ್ತು ಮತ್ತು ಈಗಲೂ ಹೆಚ್ಚಾಗಿ ಅವರದೇ ಆಗಿರುತ್ತದೆ. ತಮ್ಮ ಪಾತ್ರವೇನಿದ್ದರೂ ಆ ಚಳುವಳಿಯ ಸಂದೇಶವಾಹಕನದು ಮತ್ತು ಆಶಯಗಳ ಸಮರ್ಥಕನದು ಮಾತ್ರ ಎಂದು ಹೇಳುತ್ತಾರೆ. ತಾವು ಆ ಆಂದೋಲನವನ್ನು ಮೊದಲು ಗ್ರಾಮಗಳಿಗೆ

ತೆಗೆದುಕೊಂಡು ಹೋದುದಾಗಿಯೂ, ನಂತರ ವಿಶಾಲ ಜನಸಮುದಾಯಕ್ಕೆ ತಲುಪಿಸುವ ಕೆಲಸವನ್ನು ಮಾಡಿದುದಾಗಿಯೂ ಹೇಳುತ್ತಾರೆ. ಸುಂದರಲಾಲ್‌ಬಹುಗುಣರ ಪಾತ್ರವನ್ನು ಅರ್ಥಮಾಡಿಕೊಳ್ಳುವುದಾಗಿ ಚಿಪ್ಕೊ ಆಂದೋಲನದ ಹಿನ್ನಲೆಯಲ್ಲಿರುವ ಕೆಲ ವಿಶೇಷ ಗುಣಲಕ್ಷಣಗಳನ್ನು ಪುನರ್ ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಅದರೊಂದಿಗೆ ಆ ಆಂದೋಲನವು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯಲು ಸಂಭವಿಸಿದ ಮಹತ್ವದ ಸಂಗತಿಗಳನ್ನು ಕೂಡ ಗಮನಿಸಬೇಕಾಗುತ್ತದೆ. ಈ ವಿಷಯದಲ್ಲಿ ತಜ್ಞರ ಜ್ಞಾನವನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತೇನೆ. ಆ ವಿಷಯತಜ್ಞರು ತಮ್ಮ ಚರ್ಚೆಗಳ ಮೂಲಕ ಆಂದೋಲನದ ಸಂದರ್ಭ ಮತ್ತು ಬೆಳವಣಿಗೆ ಕುರಿತು ಅನೇಕ ಸಂಗತಿಗಳನ್ನು ಹೊರಚೆಲ್ಲಿದ್ದಾರೆ. ಈ ಅಧ್ಯಾಯವನ್ನು ಬರೆಯುವುದರಲ್ಲಿ ನಾನು ವಿಶೇಷವಾಗಿ ಪರಿಶೋಧಕರಾದ ರಾಮಚಂದ್ರ ಗುಹಾ ಮತ್ತು ಥಾಮಸ್‌ವೇಬರ್ ಅವರ ಮೇಲೆ ವಿಶೇಷವಾಗಿ ಅವಲಂಬಿಸಿದ್ದೇನೆ. ಈ ಇಬ್ಬರು ಪರಿಶೋಧಕರು ಹೇಳಿರುವ ವಿಷಯಕ್ಕೆ ಹೊಸದೇನನ್ನೂ ಸೇರಿಸುವ ಉದ್ದೇಶ ನನ್ನದಲ್ಲ. ಆದರೆ ಈ ಚಳುವಳಿಯ ಸಂದರ್ಭದಲ್ಲಿ ಬಹುಗುಣರ ಚಟುವಟಿಕೆಗಳು ಮತ್ತು ಆ ಚಟುವಟಿಕೆಗಳಿಂದಾಗಿ ಅವರ ಪ್ರಾರಂಭಿಕ ಜೀವನದ ಮೇಲೆ ಆದ ಪ್ರಭಾವವನ್ನು ತಿಳಿಸುವುದು ಆಗಿದೆ. ಅಲ್ಲದೆ ಬಹುಗುಣರು ರೂಪಿಸಿಕೊಂಡ ತತ್ವಶಾಸ್ತ್ರದ ಬೆಳಕಿನಲ್ಲಿ ಆ ಚಟುವಟಿಕೆಗಳ ಮಹತ್ವವನ್ನು ತಿಳಿಸುವುದು ಕೂಡ ಆಗಿದೆ.

ರಾಮಚಂದ್ರ ಗುಹಾರವರ ಒಳಾಂತರ್ಯದ ವಿಷಯವು ಹಿಮಾಲಯದ ಪರಿಸರದಲ್ಲಿಯ ಬದಲಾವಣೆ ಮತ್ತು ಗಡ್ವಾಲ್ ಜನರ ಜೀವನ ರೀತಿ ಮತ್ತು ಅವರ ಆರ್ಥಿಕ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಒಳಗೊಂಡಿದೆ. ಇದು ಆ ಪ್ರದೇಶದಲ್ಲಿ ವಸಾಹತುಶಾಹಿ ವಿಸ್ತಾರಗೊಳ್ಳುವ ಮುನ್ನದ್ದಾಗಿತ್ತು. ಅವರು ಬರೆದ ಅನೇಕ ಟಿಪ್ಪಣಿಗಳು ಇಂದಿನ ವಿಷಯದ ಬೆಳವಣಿಗೆಗೆ ಕಾರಣವಾಗಿದೆ. ಪ್ರಪ್ರಥಮವಾಗಿ ಗುಹಾರವರ ಪ್ರಕಾರ ಆ ಪ್ರದೇಶದಲ್ಲಿ ನದಿಯ ಆಸುಪಾಸಿನಲ್ಲಿ ಗೋಧಿ, ಅಕ್ಕಿ ಮತ್ತು ಬೇಳೆಕಾಳುಗಳನ್ನು ಬೆಳೆಯುತ್ತಿದ್ದರೂ ಕೂಡ ಇಳಿಜಾರಾದ ಪ್ರದೇಶ ಮತ್ತು ನೀರಾವರಿಗಿದ್ದ ಕಷ್ಟಗಳಿಂದಾಗಿ ಜನರ ವ್ಯವಸಾಯ ಆ ಪ್ರದೇಶಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ೧೯ನೇ ಶತಮಾನದುದ್ದಕ್ಕೂ ಎರಡು ಅಥವಾ ಮೂರು ಬಾರಿ ಸುಗ್ಗಿಗಳನ್ನು ರೈತರು ಮಾಡುತ್ತಿದ್ದರು. ಹೀಗಾಗಿ ಅಲ್ಲಿ ರಫ್ತು ಮಾಡುವಷ್ಟು ಆಹಾರ ಧಾನ್ಯ ಬೆಳೆಯುತ್ತಿದ್ದರು. ಧಾನ್ಯವನ್ನು ಟಿಬೇಟಿಗೆ ರಫ್ತು ಮಾಡಲಾಗುತ್ತಿತ್ತು. ದಕ್ಷಿಣ ಕಡೆಯ ಮೈದಾನ ಪ್ರದೇಶಕ್ಕೂ ರಫ್ತು ಮಾಡುತ್ತಿದ್ದರು.

ಆರು ತಿಂಗಳ ಕಾಲಕ್ಕೆ ಸಾಕಾಗುವಷ್ಟು ಧಾನ್ಯ ಸಂಗ್ರಹವಾಗುತ್ತಿತ್ತು. ಅದರೊಂದಿಗೆ ಮೀನು, ಹಣ್ಣು, ತರಕಾರಿ ಮತ್ತು ಮಾಂಸ ಅವರ ಆಹಾರಕ್ಕೆ ಪೂರಕವಾಗಿ ಇರುತ್ತಿದ್ದವು. ೧೮೫೬ ರಿಂದ ೧೮೮೪ರ ವರೆಗೆ ಈ ಪ್ರದೇಶದ ಕಮೀಷ್ನರ್ ಆಗಿದ್ದ ಹೆನ್ರಿ ರಾಮ್‌ಸೇ ಅವರು ಹೇಳಿದ್ದ ಮಾತನ್ನು ಗುಹಾ ಬಲವಾಗಿ ಸಮರ್ಥಿಸುತ್ತಾರೆ. ಅವರ ಪ್ರಕಾರ ಪರ್ವತ ಪ್ರದೇಶದಲ್ಲಿಯ ರೈತರು ಭಾರತದ ಇತರೆಡೆಯಲ್ಲಿಯ ರೈತರಿಗಿಂತ ಹೆಚ್ಚು ಸ್ಥಿತಿವಂತರಾಗಿದ್ದಾರೆ. ಆ ಪ್ರದೇಶಕ್ಕೆ ಪ್ರವಾಸ ಬರುತ್ತಿದ್ದ ಐರೋಪ್ಯ ದೇಶಗಳ ಪ್ರವಾಸಿಗರು ಹಿಮಾಲಯ ಪ್ರದೇಶದ ರೈತರ ಜೀವನವನ್ನು ಕಾವ್ಯಾತ್ಮಕವಾಗಿ ವರ್ಣಿಸುತ್ತಿದ್ದರು. ಆ ರೈತರ ಜೀವನವನ್ನು ಇಂಗ್ಲೆಂಡ್ ಮತ್ತು ಐರ್ಲೆಂಡ್ ರೈತರ ಜೊತೆಗೆ ಹೋಲಿಕೆ ಮಾಡುತ್ತಿದ್ದರೆಂಬುದಾಗಿಯೂ ಗುಹಾ ಪ್ರಸ್ತಾಪಿಸುತ್ತಾರೆ. ಎರಡನೇಯದಾಗಿ ಭೂಗುತ್ತಿಗೆ ಬ್ರಿಟೀಷರ ಗುತ್ತಿಗೆ ಪದ್ಧತಿಗಿಂತ ಭಿನ್ನವಾಗಿತ್ತೆಂದು ಪ್ರಸ್ತಾಪಿಸುತ್ತಾರೆ. ಆದರೆ ಆ ಪ್ರದೇಶದಲ್ಲಿ ಮುಕ್ಕಾಲು ಭಾಗ ಹಳ್ಳಿಗಳಲ್ಲಿ ಉಳುವವರೇ ಭೂ ಒಡೆಯರಾಗಿದ್ದಾರೆಂದು ಆ ಪ್ರದೇಶದ ಮೊದಲ ಕಮೀಷನರ್ ಆಗಿದ್ದ ಜಿ. ಡಬ್ಲ್ಯೂ ಟ್ರೈಲ್ ಹೇಳಿದ್ದ ಮಾತನ್ನು ಗುಹಾ ದಾಖಲಿಸುತ್ತಾರೆ. ತೆಹರಿಗಡ್ವಾಲ್ ಪ್ರದೇಶದಲ್ಲಿಯ ಭೂಹಿಡುವಳಿಗಳು ಪಾರಂಪರಿಕ ಹಕ್ಕಿಗೆ ಒಳಗಾಗಿದ್ದವು. ಧಾರ್ಮಿಕ ಅಥವಾ ಸಾಮಾಜಿಕ ದತ್ತಿಯಾಗಿಯೂ ಕೂಡ ಭೂಮಿ ಕೊಡಲ್ಪಡುತ್ತಿತ್ತು. ಆದರೆ ಗುಹಾರವರ ಪ್ರಕಾರ ಕೆಲವೇ ಕೆಲವು ಜನರು ದೊಡ್ಡ ಭೂಮಾಲೀಕರಾಗಿದ್ದರು, ಆದಾಗ್ಯೂ ವ್ಯವಸಾಯಪದ್ಧತಿ ಕುಟುಂಬಾಧಾರಿತವಾಗಿಯೇ ಇತ್ತು. ಆದ್ದರಿಂದ ಪರ್ವತಪ್ರದೇಶದಲ್ಲಿಯ ವಸಾಹತುಶಾಹಿಯು ಮೈದಾನಪ್ರದೇಶದಲ್ಲಿಯ ವಸಾಹತುಶಾಹಿಗಿಂತ ಭಿನ್ನವಾಗಿತ್ತೆಂದು ಗುಹಾ ಅಭಿಪ್ರಾಯಪಡುತ್ತಾರೆ. ಜೀತಪದ್ಧತಿ ಇಲ್ಲದೇ ಇದ್ದುದರಿಂದ ಆ ಪ್ರದೇಶದಲ್ಲಿ ಸ್ವತಂತ್ರವಾದ ರೈತ ಸಮುದಾಯವಿತ್ತು ಮತ್ತು ಅಲ್ಲಿಯ ಸಂಪನ್ಮೂಲಗಳ ಮೇಲೆ ಅದು ಪೂರ್ಣವಾಗಿ ಒಡೆತನ ಹೊಂದಿತ್ತು. ಪರ್ವತಪ್ರದೇಶದ ಮೂರನೇಯ ವಿಶೇಷ ಲಕ್ಷಣ ಮಹಿಳೆಯರ ಪಾತ್ರದ್ದು. ಪರ್ವತಗಳ ದುರ್ಗಮ ಭೂಪ್ರದೇಶದಲ್ಲಿ ಯಾವುದೇ ಒಂದು ಆರ್ಥಿಕ ಚಟುವಟಿಕೆ ಸಂಸಾರವನ್ನು ಸರಿದೂಗಿಸಲು ಸಾಲದಾಗಿರುತ್ತದೆ. ಅಲ್ಲಿಯ ಪ್ರತಿಯೊಂದು ಸಂಸಾರವು ಹಲವಾರು ಆರ್ಥಿಕ ಚಟುವಟಿಕೆಗಳನ್ನು ಹೊಂದಿರುತ್ತದೆ ಮತ್ತು ಅದರಲ್ಲಿ ಮಹಿಳೆಯರದು ಸಮಾನವಾದ ಪಾತ್ರವಿರುತ್ತದೆ. ಹೆಣ್ಣುಮಕ್ಕಳು ಮಾಡುವ ಕೆಲಸ ಪುರುಷರು ಮಾಡುವ ಕೆಲಸಕ್ಕಿಂತ ಮೌಲ್ಯವನ್ನು ಯಾವುದೇ ರೀತಿ ಕಡಿಮೆ ಇರುವುದಿಲ್ಲ. ಹೆಣ್ಣು ಮಕ್ಕಳು ಪುರುಷರೊಂದಿಗೆ

ಸರಿಸಮವಾಗಿ ಹೊಲಗಳಲ್ಲಿ ಕೆಲಸ ಮಾಡುವುದಲ್ಲದೆ ಧನ-ಕರುಗಳ ಸೇವೆಯನ್ನು ಮಾಡುತ್ತಾರೆ. ಉಳಿಮೆ ಮಾಡುವುದೊಂದನ್ನು ಬಿಟ್ಟರೆ ಇನ್ನು ಯಾವ ಕೆಲಸದಲ್ಲಿಯೂ ಹೆಂಡತಿ ಭಾಗವಹಿಸದೆ ಇದ್ದಂತಹದು ಇರಲಿಲ್ಲ. ಹೊರಗಿನ ಎಲ್ಲ ಈ ಕೆಲಸದ ಜೊತೆಗೆ ಮಹಿಳೆಯರು ಅಡುಗೆ ಮಾಡುವುದು, ಮನೆಯನ್ನು ಸ್ವಚ್ಛವಾಗಿಡುವುದು. ಮಕ್ಕಳ ಆರೈಕೆ ಸೌದ ಮತ್ತು ಮೇವು ಹಾಗೂ ನೀರು ಹೊಂದಿಸುವುದು ಇತ್ಯಾದಿ ಎಲ್ಲ ಕೆಲಸಗಳನ್ನು ಮಾಡುತ್ತಾರೆ. ಕೆಲವು ಸಂಶೋಧಕರ ಪ್ರಕಾರ ಇಲ್ಲಿಯ ಶ್ರಮವಿಭಜನೆಯಲ್ಲಿ ಲಿಂಗತಾರತಮ್ಯವನ್ನು ಕಾಣುತ್ತಾರೆ. ಯಾವುದು ಅಸಹಜಶ್ರಮ ವಿಭಜನೆ ಎಂದು ತೋರುತ್ತದೋ ಅದರ ನಿವಾರಣೆಗಾಗಿ ಶಿಕ್ಷಣವೆ ಒಂದು ಪರಿಹಾರವೆಂದು ಭಾವಿಸುತ್ತಾರೆ. ನೋಡುವವರ ಮನಸ್ಸಿನಲ್ಲಿ ಮಹಿಳೆಯರ ಈ ಸ್ಥಿತಿಯ ಬಗ್ಗೆ ಯಾವುದೇ ಪ್ರಕಾರದ ಅನಿಸಿಕೆ ಮೂಡಿಸಬಹುದು. ಆದರೆ ಗುಡ್ಡುಗಾಡು ಪ್ರದೇಶದಲ್ಲಿಯ ಜೀವನವು ಬಹುಗುಣರವರು ಆಗಾಗ್ಗೆ ವರ್ಣಿಸುವ ಪರಿಸ್ಥಿತಿಗಿಂತಭಿನ್ನವಾಗಿಲ್ಲ. ವಸಾಹತುಶಾಹಿ ಕಾಲಕ್ಕೂ ಆ ಕಾಲದಲ್ಲಿ ಮತ್ತು ನಂತರ ಪರ್ವತ ಪ್ರದೇಶದ ಜನರು ಅತೀ ಶ್ರಮಜೀವಿಗಳು ಮತ್ತು ಕಾರ್ಯಸಮರ್ಥರಾಗಿದ್ದಾರೆ. ಆ ಪ್ರದೇಶದ ಬಗ್ಗೆ ಬಹುಗುಣರವರ ಮನಸ್ಸಿನಲ್ಲಿ ಸಂಗ್ರಹಿತವಾಗಿರುವ ತಿಳುವಳಿಕೆಯ ಪ್ರಕಾರ ಕೈಗಾರಿಕೆ ಮತ್ತು ಆರ್ಥಿಕ ವಿಸ್ತರಣೆಗಿಂತ ಮುನ್ನ ಪರ್ವತ ಪ್ರದೇಶದಲ್ಲಿಯ ಜನರು ಸಂತೋಷವಾಗಿಯೂ, ಆರೋಗ್ಯಕರವಾಗಿಯೂ, ಅಭಿವೃದ್ಧಿಶೀಲರೂ ಆಗಿದ್ದರು.

ಮುಂದುವರಿಯುವುದು...

ಓದುಗರಲ್ಲಿ ಪ್ರಾರ್ಥನೆ.

ಜನಪದ ವಿಚಾರವನ್ನು ಆರ್ಥಿಕವಾಗಿ ಬಲಗೊಳಿಸಬೇಕಿದೆ ಮತ್ತು ಪತ್ರಿಕೆಯ ಗುಣಮಟ್ಟವನ್ನೂ ಹೆಚ್ಚಿಸಬೇಕಿದೆ. ಆದ್ದರಿಂದ ನೀವು ನಿಮ್ಮ ಸ್ನೇಹಿತರೊಬ್ಬರನ್ನಾದರೂ ಚಂದಾದಾರನ್ನಾಗಿ ಮಾಡಿಕೊಡುವುದಾದರೆ ಇದು ಸಾಧ್ಯ. ಈ ವಿಷಯದಲ್ಲಿ ನಿಮ್ಮ ಸಹಕಾರ ಸಿಗುವುದೆಂದು ನಂಬಿದ್ದೇನೆ. ಚಂದಾದಾರರನ್ನು ಮಾಡುವ ಈ ಅಭಿಯಾನ ಆಗಸ್ಟ್ ೩೧ ರ ಒಳಗಾಗಿ ಮುಗಿದರೆ ಅನುಕೂಲವಾಗುವುದು.

ಪ್ರಕಾಶಕರು

ಉಪ್ಪು ಧೂಳು ಮತ್ತು ಹೂವು

-ಸುಮಂಗಲ್ ಪ್ರಕಾಶ್

{ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ ೧೯೩೦ ಮಾರ್ಚ್ ೧೨ ರಿಂದ ಏಪ್ರಿಲ್ ೫ನೇ ತಾರೀಖಿನವರೆಗೆ ಮಹಾತ್ಮ ಗಾಂಧೀಯವರು ನಡೆಸಿದ ಉಪ್ಪಿನ ಸತ್ಯಾಗ್ರಹಕ್ಕೆ ಐತಿಹಾಸಿಕ ಮಹತ್ವವಿದೆ. ದಾಂಡಿಯಾತ್ರೆ ಎಂದೇ ಪ್ರಸಿದ್ಧವಾಗಿರುವ ಆ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದ ಲೇಖಕರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.}-ಸಂ

ದಾಂಡಿಯಾತ್ರೆಯಲ್ಲಿ ಸೇರುವವರ ಹೆಸರುಗಳನ್ನು ಮುಂಚಿತವಾಗಿಯೇ ಬರೆಯಲಾಗಿತ್ತು. ಪ್ರತಿಯೊಬ್ಬರು ಒಂದು ಚೀಲವನ್ನು ಮಾತ್ರ ಇಟ್ಟುಕೊಳ್ಳಬೇಕಾಗಿತ್ತು. ಅದರಲ್ಲಿಯೂ ಕೂಡ ಅತ್ಯಂತ ಕಡಿಮೆ ವಸ್ತುಗಳನ್ನು ಇಟ್ಟುಕೊಳ್ಳಬೇಕಿತ್ತು. ಎಲ್ಲಿಯವರೆಗೆ ಪೂರ್ಣ ಸ್ವರಾಜ್ಯ ದೊರೆಯುವುದಿಲ್ಲವೋ, ಅಲ್ಲಿಯವರೆಗೆ ಮನೆಯನ್ನಾಗಲಿ, ಆಶ್ರಮವನ್ನಾಗಲಿ ತೊರೆಯಬೇಕಿತ್ತು. ಎಲ್ಲ ಮಮತೆ, ಮಾಯೆಯ ಬಂಧನವನ್ನು ಮುರಿದುಹಾಕಿ ಪ್ರಾಣವನ್ನು ಅಂಗೈಯಲ್ಲಿಟ್ಟುಕೊಂಡು ಹೊರಡಬೇಕಿತ್ತು. ಯಾರಿಗೆ ದಾರಿಯಲ್ಲಿ ಆರೋಗ್ಯ ತಪ್ಪುವುದೋ ಅವರನ್ನು ಅಲ್ಲಿಯೇ ಬಿಟ್ಟು ಮುಂದೊರೆಯಬೇಕಾಗುವುದು- ಎಂದು ಕೂಡ ಗಾಂಧೀಜಿ ಅನೇಕ ಸಲ ಹೇಳಿಬಿಟ್ಟಿದ್ದರು. ಈ ಲೇಖಕನ ಆರೋಗ್ಯ ತಪ್ಪಿಯೇ ಬಿಟ್ಟಿತು. ಅದು ಸಾಮಾನ್ಯ ಕಾಯಿಲೆಯಲ್ಲ ಅವನಿಗೆ ಸಿಡುಬು ಆಗಿತ್ತು. ಆ ಸಮಯದಲ್ಲಿ ಈ ಲೇಖಕರು ಕಂಡಂಥ ಗಾಂಧಿಯನ್ನು ಬೇರೆ ಯಾರೂ ನೋಡಲಾಗಲಿಲ್ಲ-ಕಲ್ಲಿಗಿಂತಲೂ ಕಠಿಣವೆಂದು ಕೆಲವು ಸಲ ಅನಿಸಿದರೆ ಇನ್ನು ಕೆಲವು ಸಲ ಹೂವಿಗಿಂತಲೂ ಕೋಮಲವಾಗಿ ಕಂಡರು.

೧೯೩೦ ಮಾರ್ಚ್ ೧೨ ರ ಬೆಳಗಿನ ಆರುವರೆ ಗಂಟೆಗೆ ಸಾಬರಮತಿ ಆಶ್ರಮದಿಂದ ಗಾಂಧೀಜಿಯವರ ಸೇನಾಪತಿತ್ವದಲ್ಲಿ ಉಪ್ಪಿನ ಸತ್ಯಾಗ್ರಹ ಮಾಡುವ ಮೊದಲನೇ ದಳ ಹೊರಟಿತು. ೨೦೦ ಮೈಲಿ ದೂರದ ಈ ಯಾತ್ರೆ ಇತಿಹಾಸದಲ್ಲಿ ದಾಂಡಿಯಾತ್ರೆಯೆಂದೇ ಪ್ರಸಿದ್ಧವಾಗಿದೆ. ಗಾಂಧೀಜಿಯವರನ್ನು ಸೇರಿಸಿಕೊಂಡಂತೆ ಈ ದಳ ಹೊರಡುವ ಸಮಯದಲ್ಲಿ ೭೯ ಜನರು ಇದ್ದರು. ನಂತರ ಈ ಸಂಖ್ಯೆಯು ಹೆಚ್ಚಾಯಿತು.

ಗಾಂಧೀಜಿಯವರ ಹೊರ್ತಾಗಿ ಇನ್ನು ಎಲ್ಲ ಸೈನಿಕರು ತಲೆಯ ಮೇಲೆ ಬಿಳಿ ಗಾಂಧೀ ಟೋಪಿ ಹಾಕಿದ್ದರು. ಇದೇ ದಾಂಡಿಯಾತ್ರಿಕರ ಏಕ ಮಾತ್ರ

ಸಮಾನ ಪೋಷಾಕು ಆಗಿತ್ತು. ಇನ್ನು ಬೇರೆ ವಿಷಯಗಳಲ್ಲಿ ಯಾತ್ರಿಗಳಲ್ಲಿರುವ ವಿವಿಧತೆಗೆ ಯಾವ ಮಿತಿ ಇರಲಿಲ್ಲ. ಪ್ರಾಯಶಃ ಭಾರತದ ಎಲ್ಲ ಪ್ರಾಂತಗಳ ನಿವಾಸಿಗಳು ಈ ದಳದಲ್ಲಿ ಇದ್ದರು. ವೇಷಭೂಷಣದಲ್ಲಿ ಕೂಡ ಅತ್ಯಂತ ಹೆಚ್ಚು ವಿಭಿನ್ನತೆಯಿತ್ತು. ಕೆಲವರು ಪೂರ್ತ ಕ್ಷೌರಮಾಡಿಸಿಕೊಂಡವರಾಗಿದ್ದರು. ಇನ್ನು ಕೆಲವರು ಉದ್ದ ಗಡ್ಡ ಮೀಸೆ ಬಿಟ್ಟುಕೊಂಡವರಾಗಿದ್ದರು. ಕೆಲವರು ಚಪ್ಪಲಿ, ಧೋತಿ, ಕುರ್ತಾ ಮತ್ತು ಟೋಪಿ ಧರಿಸಿದ್ದರೆ ಇನ್ನು ಕೆಲವರು ಪಂಚೆ ಉಟ್ಟುಕೊಂಡು ಬರಿ ಮೈಯಲಿದ್ದರು. ಕೆಲವರು ಜುಬ್ಬದ ಬದಲು ಶಾಲು ಹೊದ್ದಿದ್ದರು. ಇನ್ನೂ ಕೆಲವರು ಬರಿಗಾಲು ಮತ್ತು ತೆರೆದ ಶರೀರರೊಂದಿಗೆ ಯಾತ್ರೆಯಲ್ಲಿ ನಡೆದುಕೊಂಡು ಬರುತ್ತಿದ್ದರು. ತಲೆ ಮಾತ್ರ ಪೂರ್ಣವಾಗಿ ಮುಚ್ಚಿಕೊಳ್ಳಲ್ಪಟ್ಟಿತ್ತು. ರಾಮಚರಿತ ಮಾನಸದಲ್ಲಿ ತುಳಸಿದಾಸರು ವರ್ಣನೆ ಮಾಡಿರುವ ಶಿವನ ಮೆರವಣಿಗೆಯಂತೆಯೇ ಈ ದಾಂಡಿಯಾತ್ರೆಯು ಶೋಭಿಸುತ್ತಿತ್ತು. ಈ ಸೇನೆಯ ನಡೆಗೆ ಕೂಡ ತನ್ನದೇ ಆದ ರೀತಿಯದಾಗಿತ್ತು. ಇಬ್ಬರು-ಇಬ್ಬರು ಸೈನಿಕರ ಹಿಂದೆ ಇನ್ನು ಇಬ್ಬರು ನಿಲ್ಲುತ್ತಿದ್ದರು. ಈ ಪ್ರಕಾರ ಇಬ್ಬರ ಸಾಲು ತಯಾರಾಗುತ್ತಿತ್ತು. ಅವರ ನಡಿಗೆಯಲ್ಲಿ ಯಾವುದೇ ಸೈನ್ಯದ ಶಿಸ್ತು ಇರಲಿಲ್ಲ. ಯಾತ್ರೆ ಹೋಗಬೇಕಾದ ದಾರಿ ಯಾವ ರೀತಿ ಇರುತ್ತಿತ್ತೊ ಅದಕ್ಕನುಗುಣವಾಗಿ ದಾಂಡಿಯಾತ್ರೆಯ ಸೈನಿಕರು ತಮ್ಮ ರೂಪು ರೇಖೆಯನ್ನು ಬದಲಾಯಿಸಿಕೊಳ್ಳುತ್ತಿದ್ದರು. ಅಗಲವಾದ ರಸ್ತೆಯಲ್ಲಿ ನಾಲ್ಕು ನಾಲ್ಕು ಜನರು ಕೂಡ ಒಟ್ಟಿಗೆ ಹೋಗುತ್ತಿದ್ದರು. ಕೆಲವೊಂದು ಸಲ ಯಾವುದೇ ಕ್ರಮ ಇರುತ್ತಿರಲಿಲ್ಲ. ಅನೇಕ ಸಲ ಒಬ್ಬೊಬ್ಬರದೆ ಸಾಲು ಆಗುತ್ತಿತ್ತು. ಈ ರೀತಿ ಅನೇಕ ಬಾರಿ ಆಗುತ್ತಿತ್ತು. ಏಕೆಂದರೆ ಕೆಲವು ಸೈನಿಕರು ಬಹಳ ಮುಂದಕ್ಕೆ ಹೋಗುತ್ತಿದ್ದರೆ ಇನ್ನು ಕೆಲವರು ಮಧ್ಯದಲ್ಲಿಯೇ ಉಳಿಯುತ್ತಿದ್ದರು. ಇನ್ನು ಕೆಲವರು ಹಿಂದೆ ಬೀಳುತ್ತಿದ್ದರು. ಸೇನಾಪತಿ ಗಾಂಧೀಜಿ ಹಿಂದೆ ನೋಡದೇ ವೇಗವಾಗಿ ಹೆಜ್ಜೆಹಾಕುತ್ತಾ ಹೋಗುತ್ತಿದ್ದರು. ಬೇರೆಯವರಿಗೆ ಅವರೊಂದಿಗೆ ಹೆಜ್ಜೆ ಹಾಕುವುದು ಕಷ್ಟವಾಗುತ್ತಿತ್ತು. ಅನೇಕ ಸಲ ಗಾಂಧೀಜಿ ಒಬ್ಬರೇ ಮುಂದುಮುಂದಕ್ಕೆ ಹೋಗುತ್ತಿದ್ದರು. ಅವರ ಎರಡೂ ಹೆಗಲುಗಳ ಮೇಲೆ ಚಿಕ್ಕ ಚಿಕ್ಕ ಚೀಲಗಳು ನೇತಾಡುತ್ತಿದ್ದವು.

ಒಂದು ತೆಳ್ಳನೆಯ ಶಾಲು ಹೊದ್ದುಕೊಂಡು, ಲುಂಗಿಯನ್ನು ಮೇಲಕ್ಕೆತ್ತಿ ಕಟ್ಟಿಕೊಂಡು, ಚಪ್ಪಲಿ ಹಾಕಿಕೊಂಡು ಗಾಂಧೀಜಿಯವರ ಅವರ ಹಿಂದೆ ಹತ್ತಿರ ಹೋಗುವ ಇರುವ ಪ್ರಯತ್ನದಲ್ಲಿ ಏದುಉಸಿರು ಬಿಡುತ್ತಾ ಪ್ಯಾರೆಲಾಲ್, ಚಗನ್‌ಲಾಲ್, ಪ್ಯಾರೆಲಾಲ್, ಜೋಷಿ, ಮುಂತಾದ ಮೂರು ನಾಲ್ಕು ಹಿರಿಯ

ಸೈನಿಕರು! ಕೈಯಲ್ಲಿ ಯಾವುದೇ ಝುಂಡಾ ಇತ್ಯಾದಿ ಇರಲಿಲ್ಲ, ಯಾವುದೇ ಬ್ಯಾಜ್ ಕೂಡ ಇರಲಿಲ್ಲ. ಯಾತ್ರೆಯ ಕೆಲವು ದಿನಗಳ ನಂತರ ಜವಾಹರ್‌ಲಾಲ್‌ನೆಹರು ಭಾರತದ ನಕಾಶೆಯ ಒಂದೊಂದು ಬ್ಯಾಜನ್ನು ಪ್ರತಿಯೊಬ್ಬ ಸೈನಿಕನ ಪೋಷಾಕದ ಮೇಲೆ ಹಚ್ಚಬೇಕೆಂದು ಗಾಂಧೀಜಿಯವರನ್ನು ಆಗ್ರಹಿಸಿದ್ದರು. ಗಾಂಧೀಜಿಯವರು ಇದನ್ನು ನೆಹರುರವರ 'ಮಕ್ಕಳ ಆಟವೆಂದು' ತಿಳಿದು ನಗುತ್ತಾ ಅದನ್ನು ಸ್ವೀಕರಿಸಿದರು ಮತ್ತು ಅಂದಿನಿಂದ ಪ್ರತಿಯೊಬ್ಬ ಸೈನಿಕನ ಬಳಿ ಒಂದು ಬ್ಯಾಜ್ ಬಂತು. ಅದನ್ನು ಕೆಲವರು ತಮ್ಮ ಟೋಪಿಯ ಎಡಭಾಗಕ್ಕೆ, ಇನ್ನು ಕೆಲವರು ತಮ್ಮ ಜುಬ್ಬದ ಮೇಲೆ, ಇನ್ನು ಕೆಲವರು ತಾವು ಹೊದ್ದ ಶಾಲಿನ ಮೇಲೆ ಅಂಟಿಸಿಕೊಂಡರು. ಗಾಂಧೀಜಿಯವರ ಶಾಲಿನ ಮೇಲೆ ಜವಾಹರ್‌ಲಾಲ್ ಸ್ವತಃ ಬ್ಯಾಜ್ ಅಂಟಿಸಿದರೆಂದು ಗೊತ್ತಾಯಿತು. ಆದರೆ ಅದು ಎಂದೂ ಹೊರಗೆ ಕಾಣಲಿಲ್ಲ. ಗಾಂಧೀಜಿಯವರು ಜವಾಹರ್‌ಲಾಲ್‌ರ ಇಚ್ಛೆಗೆ ಬೆಲೆ ಕೊಡುವುದಕ್ಕಾಗಿ ಬ್ಯಾಜ್ ಖಂಡಿತವಾಗಿ ಅಂಚಿಕೊಳ್ಳುತ್ತಿದ್ದರು. ಆದರೆ ಅದು ಶಾಲಿನ ಮೇಲಲ್ಲ ಶಾಲಿನ ಒಳಗೆ.

೧೯೩೦ ರ ಮಾರ್ಚ್ ೧೨ ರ ಬೆಳಿಗ್ಗೆ ೬.೩೦ ಕ್ಕೆ ಗಾಂಧೀಜಿ ಮತ್ತು ಅವರ ಅನುಯಾಯಿಗಳು ದಾಂಡಿಗಾಗಿ ಹೊರಟಾಗ ಸಾಬರಮತಿ ಆಶ್ರಮದ ರಸ್ತೆಯ ಮೇಲೆ ಸಾವಿರಾರು ಸಾವಿರ ಸ್ರೀ ಪರುಷರ ಗುಂಪೇ ಇತ್ತು. ಇವರಲ್ಲಿ ಹೆಚ್ಚಿನ ಸ್ರೀ ಪರುಷರು ಇಡೀ ರಾತ್ರಿ ರಸ್ತೆಯ ಮೇಲೆಯೇ ವಸತಿ ಮಾಡಿದ್ದರು.

–ಮುಂದುವರಿಯುವುದು

– ಅನು. ಸು.ಕೌ

ಕತ್ತಲೆ ಎಂಬುದು ಇತ್ತಲೆ

–ಡಾ. ಬೋರೇಗೌಡ ಚಿಕ್ಕಮರಳಿ

{ಕತ್ತಲೆ ಮತ್ತು ಬೆಳಕಿನ ಬಗ್ಗೆ ಇರುವ ಕಲ್ಪನೆಯ ನೋಟವನ್ನು ಲೇಖಕರು ಇಲ್ಲಿ ದರ್ಶಿಸಿದ್ದಾರೆ}

ಸೂರ್ಯನ ಬೆಳಕಿನಲ್ಲಿ ಬದುಕುವ ಭಾಗ್ಯವನ್ನು ನಾವು ಪಡೆದಿರುವುದರಿಂದ ಕತ್ತಲೆ ಎಂಬುದು ನಮಗೆ ಇರುಳಿನ ವಿದ್ಯಮಾನವಾಗಿ ಮಾತ್ರ ಕಾಣುತ್ತದೆ. ಭೂಮಿ ತನ್ನ ಅರ್ಧಸುತ್ತಿನಲ್ಲಿ ಬೆಳಕನ್ನೂ, ಇನ್ನರ್ಧಸುತ್ತಿನಲ್ಲಿ ಕತ್ತಲನ್ನೂ ಅನುಭವಿಸುತ್ತದೆ; ಆ ಕತ್ತಲು ಕೂಡ ಸೂರ್ಯ ಮರೆಯಾಗುವುದರಿಂದ ಆದದ್ದು, ಅದು ಭೂಮಿಯ ನೆರಳಲ್ಲದೆ ಬೇರೆಯಲ್ಲವೆಂದೂ ಭಾವಿಸುತ್ತೇವೆ. ಬೆಳಕು ಶಾಶ್ವತ, ಅದು ಇತ್ಯಾತ್ಮಕ; ಕತ್ತಲು ಮಾಯೆ, ನೇತ್ಯಾತ್ಮಕ ಆದ್ದರಿಂದ ಕತ್ತಲಲ್ಲಿ ಮುಳುಗಿದ ಜೀವವು ಬೆಳಕನ್ನು ಮರೆತು ಮಾಯೆಯ ಕೋಲಾಹಲಕ್ಕೆ ಒಳಗಾಗಿ ಮೋಹವೇ ಮೊದಲಾದ ನಾನಾ ದುರ್ವ್ಯವಹಾರಗಳಲ್ಲಿ ತೊಡಗಿಬಿಡಬಾರದು; ಜೀವ ಸದಾ ಜಾಗರವಿದ್ದು ಬೆಳಕಿಗಾಗಿ ತುಡಿಯುತ್ತಿರಬೇಕೆಂದು ಬೆಳಕು–ಕತ್ತಲಿನ ನಡುವೆ ತತ್ತ್ವವನ್ನೂ ರೂಪಿಸುತ್ತೇವೆ. ಬೆಳಕನ್ನು ಸಾತ್ವಿಕಕ್ಕೆ, ಸತ್ಯಕ್ಕೆ, ಸದ್ವಿಚಾರಕ್ಕೆ, ಜ್ಞಾನಕ್ಕೆ ಸಂಕೇತ ಮಾಡಿಕೊಂಡು ಬೆಳಕಿನ ಬಗೆಗೆ ಪ್ರೀತಿಯನ್ನೂ, ಬೆಳಕಿನ ಬಗ್ಗೆ ಹಂಬಲವನ್ನೂ ಬೆಳೆಸಿಕೊಂಡಿದ್ದೇವೆ. ಕತ್ತಲನ್ನು ತಾಮಸಕ್ಕೆ, ಸುಳ್ಳಿಗೆ, ಅಸದ್ವಿಚಾರಕ್ಕೆ, ಅಜ್ಞಾನಕ್ಕೆ ಸಂಕೇತಮಾಡಿಕೊಂಡು ಕತ್ತಲಿನ ಬಗೆಗೆ ಭೀತಿಯನ್ನೂ ತಿರಸ್ಕಾರ ಭಾವವನ್ನೂ ಬೆಳೆಸಿಕೊಂಡಿದ್ದೇವೆ. ಬೇಡವಾದ ಕತ್ತಲನ್ನು ಉತ್ತರಿಸಬೇಕಾದ ಬೆಳಕಿನ ಕಡೆಗೆ ನಡೆಯುವುದೆಂದರೆ ಜೀವವು ಭವಸಾಗರವನ್ನು ದಾಟಿ ಮುಕ್ತಿಯ ಕಡೆಗೆ ಮುಖಮಾಡಿದಂತೆ ಎಂದು ತಿಳಿಯುತ್ತೇವೆ. ಆದರೆ ಸೃಷ್ಟಿಯ ಚಿತ್ರ ಬೇರೆಯೇ ಆಗಿದೆಯೆಂಬುದನ್ನು ವಿಜ್ಞಾನ ನಮಗೆ ಹೇಳಿಕೊಡುತ್ತದೆ. ಬೆಳಕು ನಿತ್ಯವಲ್ಲ, ಕತ್ತಲು ಮಾಯೆ ಅಲ್ಲ. ಮನದ ಮುಂದಣ ಆಸೆಯೇ ಮಾಯೆ ಕಣಾ ಎಂದಂತೆ ಕತ್ತಲನ್ನು ಪರಿಭಾವಿಸುವ ನಮ್ಮ ಮನಸ್ಸಿನಲ್ಲಷ್ಟೇ ಕತ್ತಲೆಗೆ ನಾವು ಆರೋಪಿಸಿದ ನೇತ್ಯಾತ್ಮಕ ಅಂಶಗಳಿವೆ. ಶುದ್ಧ ಅಧ್ಯಾತ್ಮವು ಬೆಳಕು–ಕತ್ತಲುಗಳೆರಡನ್ನೂ ಭಗವಲ್ಲೀಲಾ ಮಾತ್ರವಾಗಿ ತಿಳಿಯುತ್ತದೆ. ಇಡೀ ವ್ಯೋಮ ಕತ್ತಲುಮಯ ಎಂದು ವಿಜ್ಞಾನ ಹೇಳುತ್ತದೆ. ಸೂರ್ಯನಂತಹ ಅದೆಷ್ಟೋ ನಕ್ಷತ್ರಗಳು, ನಕ್ಷತ್ರಪುಂಜಗಳು ಕತ್ತಲಲ್ಲಿ ಬೆಳಕಿನ ಕಿರಣಗಳನ್ನು ಹಾಯಿಸುತ್ತವೆ. ಕತ್ತಲನ್ನು ಉತ್ತರಿಸಲಾರದೆ ಸೋತು ಕೊನೆಗೊಮ್ಮೆ ಅಳಿಯುತ್ತವೆ. ಈಗ ನಾವು

ಹೇಳಬೇಕಾಗುತ್ತದೆ: ಕತ್ತಲು ಸ್ಥಾಯಿ, ಸದಾ ಇರುವಂತಹುದು; ಸಂಚಾರಿ ಬಂದು ಹೋಗುವಂತಹುದು ಮಾತ್ರ ಎಂದು ಜಗತ್ತನ್ನು ವ್ಯಾಪಿಸಿರುವ ಅಗಾಧ ಕತ್ತಲೆಯ ನಡುವೆ ಬೆಳಕಿನ ವಲಯಗಳು ತುಂಬಾ ಚಿಕ್ಕದು ಎಂಬುದು ವೈಜ್ಞಾನಿಕ ಸತ್ಯ. ಇದರ ಸಾಮಾನ್ಯ ಪರಿಚಯ ನಮಗಾಗಬೇಕಾದರೆ ಇರುಳನ್ನೇ ಮೊರೆಹೋಗಬೇಕು. ಇರುಳಿನಲ್ಲಿ ನಕ್ಷತ್ರಖಚಿತ ಆಕಾಶದತ್ತ ಮುಖಮಾಡಿದಾಗ ತಿಳಿಯುತ್ತದೆ. ಕತ್ತಲು ಎಷ್ಟು ಅಪಾರ ಹಾಗೂ ಆಳ ಎಂದು ಅದರ ಅಗಾಧತೆಯ ನಡುವೆ ಬೆಳಕಿನ ಚುಕ್ಕೆಗಳು ಎಷ್ಟು ಸಣ್ಣವು ಎಂಬುದೂ ಮನವರಿಕೆಯಾಗದೆ ಇರದು. ಬರಿಗಣ್ಣಿಗೆ ಕಾಣುವ ಚುಕ್ಕೆಗಳೆಲ್ಲ ಸ್ವತಂತ್ರ ಬೆಳಕಿನ ನಕ್ಷತ್ರಗಳಾಗಿರುವುದಿಲ್ಲ; ನಕ್ಷತ್ರಗಳು ಚಿಮ್ಮಿಸುವ ಬೆಳಕನ್ನು ತಾವು ಪಡೆದು ಪ್ರತಿಫಲಿಸಿ ಸ್ವಯಂಪ್ರಕಾಶದಂತೆ ಕಾಣುವ ಗ್ರಹಗಳು, ಉಪಗ್ರಹಗಳು, ಕ್ಷುದ್ರಗ್ರಹಗಳು ಅವುಗಳಲ್ಲಿ ಎಷ್ಟೋ ಇರುತ್ತವೆ. ಆಕಾಶಕಾಯಗಳ ನಿಖರ ಮಾಹಿತಿಗೂ ದರ್ಶನಕ್ಕೂ ವಿಜ್ಞಾನಿಗಳು ಇರುಳಿಗಾಗಿಯೇ ಕಾಯುತ್ತಾರೆ. ಪ್ರಕಾಶಿಸುವ ಸೂರ್ಯನಿಗೂ ಆ ಪ್ರಕಾಶವನ್ನು ಪಡೆದುಕೊಳ್ಳುತ್ತಿರುವ ಭೂಮಿಗೂ ನಡುವೆ ಚಂದ್ರ ಬಂದಾಗ ಭೂಮಿಯ ಮೇಲೆ ಹಗಲಿನಲ್ಲೂ ಕತ್ತಲು ಉಂಟಾಗುತ್ತದೆ. ಆ ಕತ್ತಲೆಗೆ ಕಾಯುತ್ತಿರುವ ವಿಜ್ಞಾನಿಗಳು ಆ ಕ್ಷಣಗಳಲ್ಲಿ ಸೂರ್ಯನ ಮೇಲಿನ ಹಾಗೂ ಅವನ ಸುತ್ತಣ ವಲಯದ ಸತ್ಯಗಳನ್ನು ಅರಿಯಲು ಯತ್ನಿಸುತ್ತಾರೆ. ಅಂದರೆ ಕತ್ತಲೂ ಸತ್ಯವನ್ನು ತಿಳಿಸುವ, ಅರಿವನ್ನು ವಿಸ್ತರಿಸುವ ಸಾಧನ ಅಥವಾ ಸಮಯ ಎಂದಂತಾಯಿತು. ವಸ್ತುಸ್ಥಿತಿ ಹೀಗಿರುವುದರಿಂದ ಕತ್ತಲನ್ನು ಭಯದ, ಮಿಥ್ಯೆಯ. ಅಜ್ಞಾನದ ಕುರುಹನ್ನಾಗಿ ಭಾವಿಸುವುದರಲ್ಲಿ ಅರ್ಥವಿಲ್ಲ ಎನಿಸುತ್ತದೆ. ಹಗಲಿನಂತೆ ಕತ್ತಲೂ ಭಯದ ಜೀವಗಳ ಪೋಷಕ. ವಿಶ್ರಾಮಜನಕ ಎಂಬುದು ನಮಗೆ ತಿಳಿಯದ ವಿಚಾರವೇನೂ ಅಲ್ಲ. ಕತ್ತಲಿನ ನಡುವೆಯೇ ಬದುಕುತ್ತಿರುವ ನಮಗೆ ಕತ್ತಲೆ ಮಿಥ್ಯೆಯ ಅಲೆಯಾಗಿ, ಭಯಂಕರವಾಗಿ ಕಂಡುದಕ್ಕೆ ಅದರ ಆಳ-ಅಪಾರಗಳನ್ನು ತಿಳಿಯಲಾಗದ ನಮ್ಮ ಅರಿವಿನ ಮಿತಿಯೇ ಕಾರಣ.

ಕತ್ತಲು ಅಜ್ಞಾನದ, ತಾಮಸ ಪ್ರವೃತ್ತಿಯ ಸಂಕೇತ ಎಂಬ ಪ್ರತಿ ಮಾದೃಷ್ಟಿಯನ್ನು ಇಟ್ಟುಕೊಂಡು ಈಗ ಒಂದಿಷ್ಟು ಚಿಂತಿಸೋಣ. ಕತ್ತಲನ್ನು ಹೀಗೆ ಪ್ರತಿಮೀಕರಿಸುವ ಭಾವಲಹರಿಗೆ ಪ್ರೇರಣೆ ಕತ್ತಲಲ್ಲಿಯೇ ಇದೆ ಎನಿಸುತ್ತದೆ. ಸೂರ್ಯಪ್ರಕಾಶದ ಹಗಲಿನಲ್ಲಿ ಕಣ್ಣೆದುರಿಗೇ ಕಾಣುವ ಭೂಮಿಯ ಮೇಲಿನ ಸಮೃದ್ಧವಾದ ವನರಾಶಿ, ವೈವಿಧ್ಯಮಯವಾದ ಜೀವರಾಶಿ, ಜಲರಾಶಿ. ನಿರಭ್ರನೀಲ ಆಕಾಶ-ಈ ಎಲ್ಲವೂ ಇರುಳಿನಲ್ಲಿ ಕತ್ತಲು ಆವರಿಸುತ್ತಿದ್ದಂತೆ ನೋಡನೋಡುತ್ತಲೇ ಕಾಣೆಯಾಗುತ್ತವೆ. ವಿಶ್ವಗರ್ಭವನ್ನು ವ್ಯಾಪಿಸಿರುವ ಕತ್ತಲು ಈ ಎಲ್ಲವನ್ನು

ತನ್ನಲ್ಲಿ ಒಳಗಾಗಿಸಿಕೊಂಡು ಇದಾವುದೂ ನಮ್ಮ ನೋಟಕ್ಕೆ ದಕ್ಕದಂತೆ ಮಾಡಿಬಿಡುತ್ತದೆ. ಇದ್ದೂ ಇಲ್ಲದಂತಾಗಿರುವ ಕತ್ತಲಿನ ಈ ವಿದ್ಯಮಾನ ತನ್ನೊಳಗೆ ಅಡಗಿರುವ ಅಂತರಾತ್ಮವನ್ನು ಅರಿಯಲಾಗದ ವಿಷಯಸುಖದಸೆಳವಿಗೆ ಅಂದರೆ ಅಜ್ಞಾನದ ಪರಿಣಾಮಕ್ಕೆ ಪ್ರತೀಕವಾದುದು ಸಹಜವೇ ಆಗಿದೆ. ಅಂತರಾತ್ಮವನ್ನು ಜಾಗೃತಗೊಳಿಸಿಕೊಳ್ಳಲಾಗದ ಮನುಷ್ಯ ವಿಷಯಸುಖದಸೆಳವಿಗೆಸಿಕ್ಕಿ ಆ ಸುಖವನ್ನು ಪಡೆದುಕೊಳ್ಳುವುದಕ್ಕೋಸ್ಕರ ಪಾಶವೀಕೃತ್ಯದಲ್ಲಿ ತೊಡಗುತ್ತಾನೆ. ಅವನ ಈ ಅಕೃತ್ಯಗಳಿಗೆ ಹಗಲಿಗಿಂತ ಕತ್ತಲು ಸೂಕ್ತ ಸನ್ನಿವೇಶಗಳನ್ನು ಒದಗಿಸಿಕೊಡುತ್ತದೆ. ಮನುಷ್ಯನ ಈ ವಿನಾಶಕಾರಿ ಕ್ರಿಯೆಗೆ ಅವನ ಅಜ್ಞಾನ, ಅಂದರೆ ತಾಮಸ ಪ್ರವೃತ್ತಿಯೇ ಕಾರಣ . ಹೀಗಾಗಿ ಮನುಷ್ಯನ ತಾಮಸ ಪ್ರವೃತ್ತಿಗೆ ಕತ್ತಲು ಸಂಕೇತವಾಗುತ್ತದೆ. ತಾಮಸ ಸ್ವಭಾವಕ್ಕೆ ಪ್ರಸಿದ್ಧರಾದ ನಮ್ಮ ಪುರಾಣಲೋಕದ ರಾವಣ, ಕಂಸ, ದುರ್ಯೋಧನ, ದುಶ್ಯಾಸನ, ಶಕುನಿ ಮೊದಲಾದವರಿಗೆ ನಮ್ಮ ಮಾಧ್ಯಮಲೋಕ ಕಪ್ಪುವಸ್ತ್ರಗಳನ್ನು ಧರಿಸಿದ್ದು ಅವರನ್ನಾವರಿಸಿದ ಅಜ್ಞಾನವೆಂಬ ಕತ್ತಲನ್ನು ಸೂಚಿಸುವುದಕ್ಕಾಗಿಯೇ.

ವಿಶ್ವವನ್ನೆಲ್ಲ ಕತ್ತಲು ಆವರಿಸಿದೆ ಎಂಬ ಮಾತಿಗೆ ಮತ್ತೆ ಬರೋಣ. ಮಾನವ ಇತಿಹಾಸವನ್ನು ಅವಲೋಕಿಸಿದರೆ ಅವನು ಗೈದಿರುವ ಅಕೃತ್ಯಗಳ ಸರಮಾಲೆಯೇ ನಮ್ಮೆದುರಿಗೆ ನಿಲ್ಲುವುದು ತಿಳಿದ ವಿಚಾರವೇ ಆಗಿದೆ. ವರ್ತಮಾನ ಇದಕ್ಕೆ ಹೊರತೇನೂ ಅಲ್ಲ. ನಿಸರ್ಗವನ್ನು ದೋಚುವ, ನೀತಿನಿಯಮಾದಿಗಳನ್ನು ಮೀರುವ, ಧನಕನಕಾದಿ ವಸ್ತುಸಂಚಯನದಲ್ಲಿ ಅನುರಕ್ತರಾಗಿರುವ ಜನರೇ ಭೂತ ವರ್ತಮಾನಗಳೆರಡಲ್ಲೂ ವಿಜೃಂಭಿಸುತ್ತಿರುತ್ತಾರೆ. ಈ ಕೋಲಾಹಲದ ನಡುವೆಯೇ ಬದುಕನ್ನು ನೇರ್ಪುಗೊಳಿಸುವುದಕ್ಕಾಗಿ ಜೀವಮಾನವನ್ನು ಮುಡಿಪಾಗಿರಿಸಿದ ಮಾನವ ನಕ್ಷತ್ರಗಳು ಆಗಾಗ ಮಿನುಗುತ್ತವೆ. ಅವರ ಪ್ರಭಾವಲಯ ಆವರಿಸಿದ ಪ್ರದೇಶ ಆವರಿಸಿದಷ್ಟು ಕಾಲ ಬೆಳಕು ಪೂರೈಸುತ್ತದೆ. ಮರುಕ್ಷಣ ತಮಂಧ ಆವರಿಸಿಕೊಳ್ಳುತ್ತದೆ. ಈ ಅನುಭವದಲ್ಲಿ ನಲುಗಿದ ಅಮಾಯಕ ಬೆಳಕೆಂಬುದು ಅತ್ತತ್ತಲೇ ಬರೀ ಕತ್ತಲು ಮಾತ್ರ ಇತ್ತಲೇ ಎಂದು ಉದ್ಗರಿಸಬೇಕಾದ ವಿಷಾದಯೋಗಕ್ಕೆ ಮನುಷ್ಯ ಸರಿಯುತ್ತಾನೆ.

ಕಲ್ಪನಾ ವಿಲಾಸ

ಆಕಾಶದಲ್ಲಿ ಶ್ರೀಕೃಷ್ಣ ದರ್ಶನ!

-ಲಲಿತ ಎಸ್

ನೋಡುನೋಡುತ್ತಿದ್ದಂತೆ ಕತ್ತಲೆ ಕವಿದಂತಾಯಿತು. ಆಕಾಶದಲ್ಲಿ ವಿವಿಧ ಆಕಾರದ ಕಪ್ಪುಮೋಡಗಳು ದಟ್ಟೈಸಿದವು. ಬಾಲ್ಯದಲ್ಲಿ ಇದೇ ರೀತಿ ಸಂಜೆಯ ಮೋಡಗಳ ಆಕಾರವನ್ನು ನೋಡುತ್ತ ಮೊಸಳೆ, ಹಾವು, ರಾಕ್ಷಸ ಎಂದೆಲ್ಲ ಭಾವಿಸಿ ಹೆದರುತ್ತಿದ್ದುದು ನೆನಪಾಯಿತು. ಈಗ ಆ ಒಂದು ಮಾನವಾಕೃತಿಯ ಮೋಡ ಅದೇನೋ ಆಕರ್ಷಕವೆನಿಸಿತು. ಸೂಕ್ಷ್ಮವಾಗಿ ಗಮನಿಸಿದೆ. ತಲೆಯ ಮೇಲೆ ನವಿಲುಗರಿಯನ್ನಿಟ್ಟಂತೆ ಕಾಣಿಸಿತು. ನನ್ನ ದೃಷ್ಟಿ ಹಾಗೇ ಕೆಳಗಿಳಿಯಿತು. ಬಾದಾಮಿಯಾಕಾರದ ಮೊಗದಿಂದ ಹೊರಚಾಚಿದ ಕೊಳಲು, ಅದನ್ನು ಹಿಡಿದ ಕೈಗಳು, ಕಾಲಿನ ಭಾಗದಲ್ಲಿ ಹಸುವೊಂದು ನಿಂತಿರುವಂತೆ ಭಾಸವಾಯಿತು. ಇದೇನು ಘನಶ್ಯಾಮನೇ? ವಾಮನ ತ್ರಿವಿಕ್ರಮನಾಗಿ ಬೆಳೆದಂತೆ ಆಕಾಶಮಾರ್ಗದಲ್ಲಿ ಕೃಷ್ಣ ನಿಂತಿದ್ದಾನೆಯೇ? ಹೌದು ಎಂದಿತ್ತು ಮನಸ್ಸು. ಅವನೂ ನೀಲವರ್ಣನೇ ತಾನೇ! ದೇವನಿಗೂ ಪ್ರಕೃತಿಗೂ ಅದೆಷ್ಟು ಸಾಮ್ಯತೆ ! ಆಶ್ಚರ್ಯದ ವಿಷಯವೇ. 'ನನಗೇನೂ ಅರ್ಜುನನಂತೆ ನಿನ್ನ ವಿಶ್ವರೂಪವನ್ನು ನೋಡುವ ಆಸೆಯಿಲ್ಲ. ನಿನ್ನ ಗೋಪಾಲಕನ ಸೌಮ್ಯರೂಪವೇ ನನಗೆ ಸಾಕು'-ನಾನೆಂದೆ. 'ನಾನೂ ಅಷ್ಟೆ, ಒಬ್ಬರಿಗೆ ಕಾಣಿಸಿದಂತೆ ಮತ್ತೊಬ್ಬರಿಗೆ ಕಾಣಿಸುವವನಲ್ಲ'-ಅವನೆಂದ. ನಾನೇ ಮಾತನ್ನು ಮುಂದುವರಿಸಿದೆ-'ನಾನು ಭಗವದ್ಗೀತೆಯಲ್ಲಿನ ನಿನ್ನ ಉಪದೇಶಗಳನ್ನು ಓದುತ್ತಿದ್ದಂತೆ ನಿನ್ನ ಅನೇಕ ರೂಪಗಳ ದರ್ಶನವನ್ನು ಮಾಡಿದ್ದೇನೆ. ಆದರೆ ನಿನ್ನ ಮಾತುಗಳೇ ಒಮ್ಮೊಮ್ಮೆ ನನ್ನನ್ನು ತಬ್ಬಿಬ್ಬುಗೊಳಿಸುತ್ತವೆ, ಹಾಗೆಯೇ ನಿನ್ನ ಕೆಲಸಗಳೂ ಸಹ. ಅಳಿವಿಲ್ಲದ ಆತ್ಮಕ್ಕೆ ಅಳಿಯುವಂತಹ ಶರೀರದ ನಂಟನ್ನು ಕೊಟ್ಟೆ. ಶರೀರ ಶರೀರಗಳನ್ನು ಸಂಬಂಧಗಳ ಸಂಕೋಲೆಯಲ್ಲಿ ಕಟ್ಟಿ ಮಮಕಾರದ ಗೂಡಿನಲ್ಲಿ ಬಂಧಿಸಿಟ್ಟೆ. **ಕರ್ಮಣ್ಯೇವಾಧಿಕಾರಸ್ತೇ** ಎಂದಿದ್ದೀಯೆ. ನಿರೀಕ್ಷೆಗಳನ್ನಿಟ್ಟುಕೊಳ್ಳುವ ಮನಸ್ಸನ್ನು ಕೊಟ್ಟಿದ್ದೀಯೆ. ಬಯಕೆಗಳನ್ನು ತೊರೆದು ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಿದವನು **ಸ್ಥಿತಪ್ರಜ್ಞ**ಎಂದಿದ್ದೀಯೆ. ಆದರೆ ಈ ಜಗತ್ತನ್ನೇ ಒಂದು ಆಕರ್ಷಣೆಯ ಕೇಂದ್ರವನ್ನಾಗಿ ಮಾಡಿದ್ದೀಯೆ. ಜ್ಞಾನಯೋಗದ ಜೊತೆಗೆ ಕರ್ಮಯೋಗವನ್ನೂ ಬೋಧಿಸಿದವ ನೀನು. ಆಸೆ ನಿರಾಸೆಗಳ ನಡುವೆ ತೂಗುವ ಮನಸ್ಸನ್ನು ನಿಲ್ಲಿಸುವುದೇ ಕಷ್ಟ, ಏಕೆಂದರೆ ಭೂಮಿಯ ಲಕ್ಷಣವೇ ಹಾಗಿದೆ. ಚಲಿಸುತ್ತಿರುವ ಭೂಮಿಯಮೇಲೆ ವಾಸಿಸುತ್ತಿರುವ ನಾವು ಭೂಮಿಯ ತತ್ವವನ್ನೇ ಅನುಸರಿಸುತ್ತಿದ್ದೇವೆ. ಹಸಿವು ಬಾಯಾರಿಕೆಗಳ ದಾಳಿಗೆ ಒಳಗಾದ ಜೀವಿ ಅವುಗಳ ನಿವಾರಣೆಗೆ ಮಾರ್ಗೋಪಾಯಗಳನ್ನು ಹುಡುಕುವಷ್ಟರಲ್ಲೇ

ಜೀವಿಯ ಅರ್ಧ ಆಯಸ್ಸು ಮುಗಿದಿರುತ್ತದೆ. **ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ, ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ** ಎನ್ನುವ ನಿನ್ನ ವಾಕ್ಯವನ್ನು ಓದಿದಾಗಲೆಲ್ಲ ನಿನ್ನನ್ನು ಒಲಿಸಿಕೊಳ್ಳುವುದು ಇಷ್ಟು ಸುಲಭವೇ ಎನ್ನಿಸುತ್ತದೆ. **ನಾಹಂ ವೇದೈರ್ನ ತಪಸಾ ನ ದಾನೇನ ನಚೇಜ್ಯಯಾ, ಶಕ್ಯ ಏವಂವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ**–ಎಂದು ಓದಿದಾಗಲೆಲ್ಲ ಅಬ್ಬ! ನಿನ್ನನ್ನು ಕಾಣಲು ಅದೆಷ್ಟು ಕಷ್ಟಪಡಬೇಕೋ ಎನ್ನಿಸದೆ ಇರದು. ಇನ್ನು ಮೋಕ್ಷವಂತೂ ನನ್ನಿಂದ ದೂರವೇ ಉಳಿಯಿತು ಬಿಡು. ನೀ ಏನೇ ಹೇಳು, ನಿನ್ನ ಎರಡು ಮಾತುಗಳು ಮಾತ್ರ ನನ್ನ ಮನದಲ್ಲಿ ಗಟ್ಟಿಯಾಗಿ ನಿಂತಿವೆ. ಅದರಲ್ಲಿ ಒಂದು **ಯೋಗಕ್ಷೇಮಂ ವಹಾಮ್ಯಹಂ** ಎನ್ನುವುದು. ನೀನೇನೋ ಭೂಮಿಯನ್ನು ಬಿಟ್ಟು ಹೊರಟುಬಿಟ್ಟೆ ಆ ಹಸು ಕರುಗಳೆಲ್ಲವೂ ತಬ್ಬಲಿಗಳಾದವು. ದ್ವಾಪರ ಹೋಗಿ ಕಲಿ ಬಂತು. ಇನ್ನು ಹೇಳುವುದೇನಿದೆ? ಪ್ರಾಣಿಗಳ ಮತ್ತು ಅಮಾಯಕರ ರಕ್ಷಣೆಯ ಹೊಣೆಯನ್ನು ನೀನೇ ಹೊರಬೇಕು. ಅಂತಹ ಕಷ್ಟದ ಪರಿಸ್ಥಿತಿಯಲ್ಲಿಯೇ ಅವಳುಟ್ಟ ಸೀರೆಯನ್ನೇ ಅಕ್ಷಯವಸ್ತ್ರವಾಗಿಸಿ ಅಗ್ನಿಪುತ್ರಿ ದ್ರೌಪದಿಯ ಮಾನವನ್ನು ಕಾಪಾಡಿದವನು ನೀನು. ನಮ್ಮ ಕಷ್ಟಗಳನ್ನು ಪರಿಹರಿಸುವುದು ನಿನಗೆ ಕಷ್ಟವೇನಲ್ಲ. ನಿನ್ನ ಎರಡನೆಯ ಮಾತು ಸಂಭವಾಮಿ ಯುಗೇಯುಗೇ ಎನ್ನುವುದು. ಅದು ನಿನ್ನ ಆಶ್ರಯವನ್ನು ಬಯಸುವವರಿಗೆ ನೀನು ಕೊಟ್ಟ ವಚನ. ಈ ಕಲಿಯುಗದಲ್ಲಿ ನೀನಿನ್ನೂ ಬರಲೇಇಲ್ಲವಲ್ಲ ಎಂದು ನಾನು ಯೋಚಿಸುತ್ತಿದ್ದುದು ನಿಜ. ಆದರೆ ನನಗೆ ಕಷ್ಟವೆನಿಸಿದಾಗಲೆಲ್ಲ ಯಾರೋ ಬಂದು ಸಹಾಯ ನೀಡಿದಾಗಲೆಲ್ಲ ಅವರಲ್ಲಿ ನಾನು ನಿನ್ನನ್ನೇ ಕಾಣುತ್ತಿದ್ದೇನೆ. ಯುಗಯುಗದಲ್ಲಿ ಮಾತ್ರವಲ್ಲ, ಕ್ಷಣಕ್ಷಣಗಳಲ್ಲೂ ನಿನ್ನ ಅನಂತತೆಯನ್ನು, ನಿನ್ನ ಲೀಲೆಗಳನ್ನು, ನಿನ್ನ ಔದಾರ್ಯವನ್ನು ಸವಿದ ಮನಸ್ಸು ನನ್ನದು. ದೈವಂ ಮಾನುಷ ರೂಪೇಣ ಎನ್ನುವ ಉಕ್ತಿ ಕಲಿಯುಗಕ್ಕಾಗಿಯೇ ಹುಟ್ಟಿರಬಹುದು. ಹೇಗಿದ್ದರೂ ಪರಮಪುರುಷನಾದ ನಿನ್ನ ಸುಂದರ ಮನಮೋಹಕ ರೂಪವನ್ನು ದೇವಾಲಯಗಳಲ್ಲಿ ನೋಡಿ ನಾವು ಕಣ್ತುಂಬಿಕೊಳ್ಳಬಹುದಲ್ಲ!'

ನನ್ನಷ್ಟಕ್ಕೆ ನಾನು ಹೇಳುತ್ತಲೇಇದ್ದೆ. ತಣ್ಣನೆಯ ಗಾಳಿ ಸುಂಯ್ಯೆಂದು ಬೀಸಲಾರಂಭಿಸಿತು. ಅದು ಅವನ ಕೊಳಲಗಾನವಾಗಿರಬಹುದೇ ಎನ್ನಿಸುತ್ತಿರುವಂತೆಯೇ ಗುಡುಗಿನ ಶಬ್ದ ಕೇಳಿಸಿತು. ಅದು ಅವನ ಪಾಂಚಜನ್ಯದ ಶಬ್ದವಾಗಿತ್ತೇನೋ. ಮಳೆಹನಿಗಳು ನಿಧಾನವಾಗಿ ಉದುರಲಾರಂಭಿಸಿದವು. ಇದು ಅವನ ಭಾಷೆಯೇ? ನನ್ನ ಅನುಮಾನಗಳಿಗೆ ಅವನ ಸಮಾಧಾನವೇ? ಇಲ್ಲ, ಅವನ ಇರುವಿಕೆಗೆ ಸಾಕ್ಷಿಯೇ? ನೋಡುತ್ತಿದ್ದಂತೆ ಆ ಮೋಡ ನಿಧಾನವಾಗಿ ಆಕಾಶದ ಕತ್ತಲಿನೊಂದಿಗೆ ಲೀನವಾಯಿತು. ಅವನ ದರ್ಶನಭಾಗ್ಯ ಪ್ರಾಪ್ತಿಯಲ್ಲಿದ್ದಷ್ಟೇ ಎನ್ನಿಸಿತು. ಆಡುತ್ತಿದ್ದ ಹುಡುಗನೊಬ್ಬ – ಹೋ! ಮಳೆ ಬಂತು!–ಎಂದು ಕೂಗಿದಾಗಲೇ ನಾನು ವಾಸ್ತವಕ್ಕೆ ಮರಳಿದ್ದು.

●

ವೈಚಾರಿಕ ಪ್ರಬಂಧ

ಅಹಂಕಾರವೇ ಅಜ್ಞಾನ

–ಯಶೋದ ರಾಮಕೃಷ್ಣ

ಕುಳಿತಲ್ಲೇ ಪ್ರಪಂಚ ಪರ್ಯಟನೆ ಮಾಡುವ ಮನಸ್ಸಿನ ಆಳ, ಅಂತರ ಕೊನೆ ಮೊದಲಿಲ್ಲದ ಜಗತ್ತಿನಷ್ಟೇ ವಿಸ್ತಾರ. ಆದರೆ ಭಾವಗಳು ಮಾತ್ರ ಸಂಕುಚಿತ. ಹಲವರಲ್ಲಿ ಅಹಂ ಎಂಬ ದುರ್ಗುಣ ಸ್ವಭಾವತಹಃ ರಕ್ತಗತವಾಗೆ ಬಂದಿರುತ್ತದೆ. ಕೆಲವರು ನಾನು ತುಂಬಾ ಬುದ್ಧಿವಂತ, ಮೇಧಾವಿಯೆಂದು, ಹಲವರಿಗೆ ಶ್ರೀಮಂತಿಕೆ, ಮೇಲ್ಪಟ್ಟ ಅಧಿಕಾರದ ದರ್ಪ, ಯೌವನ, ಸೌಂದರ್ಯ ಹೀಗೆ ನಾನಾ ಪ್ರಕಾರಗಳಲ್ಲಿ ಅಹಂಕಾರವೆಂಬ ಅಂಧತ್ವ ಅಂತರ್ಗತವಾಗಿರುತ್ತದೆ.

ಅವಿದ್ಯೆ, ಅಜ್ಞಾನದಿಂದಲೂ ಗರ್ವ ಹುಟ್ಟುತ್ತದೆ. ಅಸೂಯೆ, ಅಹಂಕಾರ, ಸ್ವಾರ್ಥ, ದುರಭಿಮಾನದ ನಮ್ಮ ಅಂತರಂಗದ ಕಳೆಗಳು. ನಮ್ಮಲ್ಲಿರುವ ಅಂತರಾಳದ ಕಲ್ಮಶದ ಕಳೆಯನ್ನು ಕಿತ್ತೊಗೆದಾಗಲೇ ಮನದ ಶುದ್ಧತೆ ಜ್ಞಾನಪುಷ್ಪದ ವಿಕಸತೆ, ದುರಭಿಮಾನ ದುರ್ಗುಣ ಅನರ್ಥಕ್ಕೆ ದಾರಿ. ಸಹಮಾನವರಲ್ಲಿ ಅಹಂಕಾರ ಅಳಿದಾಗಲೇ ಸೇವೆ, ಸಹಕಾರ, ಸಮರ್ಪಣಾ ಭಾವ ಹೃದಯಾಂತಾರಾಳದಲ್ಲಿ ಚಿಮ್ಮುವ ಒರತೆಯಾಗುತ್ತದೆ. ಅಶಕ್ತರಿಗೆ, ದೀನರಿಗೆ, ಅರ್ಹರಿಗೆ, ಬೇಡಿದವರಿಗೆ ಉಪಕಾರ, ಮಾಡಿದಾಗ ನಾನು ಮಾಡಿದೆನೆಂಬ ಇಗೋ, ದರ್ಪದಿಂದಬೀಗಿದರೆ ಮಾಡಿದ ಫಲ ನಮ್ಮದಾಗದು. ಈ ಸೃಷ್ಟಿಯಲ್ಲಿ ನಾನು ಒಬ್ಬ ಸಾಮಾನ್ಯ ಜೀವಿ, ಹುಟ್ಟುತ್ತಾ ಬೆತ್ತಲೆ, ಸಾವಿನಲ್ಲೂ ಬೆತ್ತಲೆ, ಅಧಿಕಾರ ಅಂತಸ್ತು, ಕೀರ್ತಿ, ಐಶ್ವರ್ಯ ಎಲ್ಲವೂ ಈ ದೇಹದಲ್ಲೇ ಲೀನವಾಗುವುದು ಎಂಬ ಸತ್ಯದ ಅರಿವಿನ ಪ್ರಜ್ಞೆಯಲ್ಲಿ ಮುನ್ನಡೆಯಬೇಕು.

ಹುಟ್ಟುತ್ತ ಯಾರು ಎಲ್ಲವನ್ನೂ ಹೊತ್ತು ಬಂದವರಲ್ಲ. ಅವರವರ ವೃತ್ತಿ ಧರ್ಮ ಕರ್ಮಗಳಂತೆ ಭಗವಂತನ ಅಧೀನದಲ್ಲಿ, ಮಾನವರ ಬದುಕು ರೂಪುಗೊಳ್ಳುತ್ತದೆ.

ತುಂಬಿದ ಕೊಡ ತುಳುಕುವುದಿಲ್ಲ ಎಂಬ ನಾಣ್ಣುಡಿಯಂತೆ ಅನೇಕ ಧಾರ್ಮಿಕ ಶರಣ ಸತ್ಪುರುಷರು ಸೇವೆ, ತ್ಯಾಗ, ವೈಶಾಲ್ಯತೆಯ ಉನ್ನತ ಸಮಾಜದ ಮೌಲ್ಯಗಳ ಸನ್ಮಾರ್ಗಿಗಳಾಗಿ ಬದುಕನ್ನು ಅರ್ಥಪೂರ್ಣವಾಗಿಸಿದ್ದಾರೆ. ವಿಶಾಲ ಮನಸ್ಸಿನವರಿಗೆ ಅಹಂಕಾರವೆಂಬುದು ಹತ್ತಿರ ಸುಳಿಯದು. ಸ್ವಪ್ರತಿಷ್ಠೆ, ಅಹಂ, ಕೌಟುಂಬಿಕಕಲಹಗಳು ಸಮಾನತೆಯ ಯುಗದಲ್ಲಿ ಸೋಲುವ ಮನಸ್ಸೆಲ್ಲಿದೆ. ಪದವಿ, ಅಧಿಕಾರ ಐಶ್ವರ್ಯಕ್ಕಾಗಿ ದೇವರನ್ನು ಮೊರೆ ಹೋಗುವ ಭ್ರಮಾದೀನರು ಅನೇಕರಿದ್ದಾರೆ. ಐಶ್ವರ್ಯ ತುಂಬಿದಾಗ, ಹತ್ತಿರ ಬಂದಾಗ ದುರಭಿಮಾನದಿಂದ ಬೀಗುತ್ತಾರೆ. ಅವರ ಲೌಕಿಕ ಸುಖಭೋಗಗಳಲ್ಲಿ, ಸಂಪತ್ತಿನ ಮದದಲ್ಲಿ ದೇವರ ನಾಮಸ್ಮರಣೆಯು ಮನದಿಂದ ಅಳಿಸಲ್ಪಟ್ಟು ಎಲ್ಲವೂ ತನ್ನದೆಂಬ ಮೋಹದಲ್ಲಿ ಮುಳುಗಿಬಿಡುತ್ತಾನೆ.

ಯಾವುದೇ ಸುಖ, ಸಂಪತ್ತು ನಿಶ್ಚಲವಲ್ಲ. ಕಾಲನ ವಶದಲ್ಲಿ ಕರ್ಮಾನುಸಾರ

ಕರಗಿಹೋಗಬಹುದು. ಬುದ್ಧಿಗೆ ಅಹಂ ಕವಿದಾಗ ಪ್ರಪಂಚವೇ ತನ್ನದೆಂಬ ಭ್ರಮೆ ಮನಸ್ಸನ್ನು ಆವರಿಸಿಬಿಡುತ್ತದೆ.

"ಧರೆಯ ಭೋಗವ ಮೆಚ್ಚಿ ಮರೆದು ನೀ ಕೆಡಬೇಡ, ಧರೆಯ ಭೋಗವು ಇರುಳ ಕನಸಿನಂತೆ" ಎಂಬುದು ಕವಿಯ ಸೂಕ್ತಿಯಾಗಿದೆ.

ನನ್ನ ಶ್ರೀಮಂತಿಕೆ, ಅಧಿಕಾರದಿಂದ ಸಮಾಜಕ್ಕೆ ಉಪಕಾರವೇನು? ನನ್ನ ಕೊಡುಗೆಯೇನು ಎಂಬ ಉದಾತ್ತತೆಯ ಭಾವಶಕ್ತಿ ಚೇತನವಾಗಬೇಕು. ಆಗ ಶ್ರೀಮಂತಿಕೆಗೊಂದು ಬೆಲೆ ಬಾಹ್ಯಾಡಂಬರದ ಶ್ರೀಮಂತಿಕೆಗಿಂತ ಆಂತರ್ಯದ ಸೌಂದರ್ಯ ಸರ್ವರ ಸರ್ವೋನ್ನತಿಯಲ್ಲೇ ವ್ಯಕ್ತಿತ್ವದ ಮೌಲ್ಯ ಶೋಭಿಸುತ್ತದೆ. ಗೌರವಕ್ಕೂ ಪಾತ್ರನಾಗುತ್ತಾನೆ.

ಅಹಂಕಾರ ಅಳಿಯದೆ ಆತ್ಮಜ್ಞಾನವಾಗಲಿ, ಭವಸಾಗರದಿಂದ ಮುಕ್ತಿಯಾಗಲಿ ದೊರಕದು. ಕೀರ್ತಿ, ಸ್ಥಾನಮಾನ, ವೈಭೋಗ, ಆಸ್ತಿಪಾಸ್ತಿಗಳು ಮೇರೆ ಮೀರಿದಾಗ ದುರಹಂಕಾರ ಎನ್ನುವುದು ಮಣಿಯಲು ಬಿಡದೆ ಆಳುತ್ತಾ ಸೆಟೆದು ನಿಲ್ಲುತ್ತದೆ.

ಅಹಂವಿಕೆಯಿಂದ ನಮ್ಮ ಮುನ್ನಡೆಗೂ ಸಂಚಕಾರವಾಗುತ್ತದೆ. ಯಾವುದೇ ಸನ್ನಿವೇಶದಲ್ಲೂ ಸಮತೋಲನ ಮೀರದಂತೆ ಮನಸ್ಸನ್ನು ನಿಯಂತ್ರಿಸಿಕೊಳ್ಳುವುದು ವಿವೇಕಿಗಳ ವ್ಯಕ್ತಿತ್ವ ವಿಕಸನಕ್ಕೆ ಸಾಧಕವಾಗಿದೆ. ಆತ್ಮಜ್ಞಾನಿಗಳಾದವರು ಯಾವುದೇ ಆಸೆ ನಿರೀಕ್ಷೆಗಳಿಗೂ ಅಂಟಿಕೊಳ್ಳದೆ ಈ ಜಗತ್ತಿನಲ್ಲಿ ಎಲ್ಲವೂ ದೈವಕೃಪೆಯಿಂದಲೇ ನಿರ್ಣಯಿಸಲ್ಪಟ್ಟಿರುತ್ತವೆ. ಅವನು ಇಟ್ಟಂತೆ ನಮ್ಮ ಬದುಕು. ನಾನು ಎಂಬುದು ನಶಿಸಿಹೋಗುವಂತಹದು ಎಂಬ ಸಾಧನೆಯ ಮಾರ್ಗದಲ್ಲಿ ಧಾರ್ಮಿಕ ಪಥದಲ್ಲಿ ಶುದ್ಧಾಂತಹಕರಣದಲ್ಲಿ ಲೋಕಹಿತಕರವಾದ ಅಪೇಕ್ಷೆಯುಳ್ಳವರಾಗಿರುತ್ತಾರೆ.

ಉದಾಹರಣೆಯೆಂಬಂತೆ: ಒಮ್ಮೆ ಉತ್ತಮ ಕುಲದ ಧರ್ಮಪ್ರಜ್ಞೆಯ ಕೃಷ್ಣನ ಪರಮಭಕ್ತರೆಲ್ಲಾ ಸೇರಿ ನಿಮ್ಮಲ್ಲಿ ಯಾರು ಸ್ವರ್ಗಕ್ಕೆ ಹೋಗುವಿರಿ ಎಂದಾಗ ಎಲ್ಲರೂ ಹೋಗಲು ಸಾಧ್ಯವಿಲ್ಲವೆಂದರು. ಕನಕದಾಸರನ್ನು ನೀನು ಹೋಗುವೆಯಾ ಎಂದು ಉತ್ತಮಕುಲದವರು ಕೇಳಿದಾಗ ನಾನು "ಹೋದರೂ ಹೋಗಬಹುದೆಂದರು. ನಾನತ್ವದ ಅಹಂಕಾರ ಅಳಿದಾಗ ದೇವರು ನಮಗೆ ಒಲಿಯುತ್ತಾನೆ. ನಮ್ಮ ಭಕ್ತಿಯ ತೀವ್ರ ನಿವೇದನೆಗೆ ಭಗವಂತ ಅನುಗ್ರಹಿಸುತ್ತಾನೆ ಎಂಬ ನಿರ್ವಿಕಾರವಾದ, ನಿರ್ಮಲವಾದ ಆತ್ಮಶುದ್ಧಿಯ ಚಿಂತನೆಗಳು ಭಕ್ತಿಭಾವದಲ್ಲಿ ನಿತ್ಯಾನಂದವಾಗಿ ಹೊಮ್ಮತ್ತವೆ. ಇದು ಕನಕದಾರ ಲೌಕಿಕ ಸೆಳೆತ ಮೀರಿದ ಧ್ಯಾನಶಕ್ತಿಯ ಸಂಕೇತವಾಗಿದೆ.

ಯಾವುದೇ ಉತ್ತಮ ಗುರಿಯೆಡೆಗೆ ಸಾಗಲು ಧ್ಯೇಯ, ಆದರ್ಶ ವಿಶಾಲ ಹೃದಯವಂತಿಕೆ ವಿವೇಕ, ಸಹನೆ ಮುಖ್ಯವಾಗುತ್ತದೆ. ಕಂಗಳ ಮುಂದಣ ಕತ್ತಲೆಯಂತೆ, ವಿನಾಶ ಕಾಲೇ ವಿಪರೀತ ಬುದ್ಧಿ ಎಂಬ ಮಾತಿನಂತೆ ಅಹಂಕಾರ ಅಧಃಪತನ ಹಾಗೂ ಅನರ್ಥಕ್ಕೆ ಮೂಲವಾಗುತ್ತದೆ.'ನಾನು' ಹೋದರೆ ಮಾತ್ರ ಪಥದಲ್ಲಿ ಮುನ್ನಡೆ ಸಾಧ್ಯ, ನಾನು ವಿನ ನಾಶಕ್ಕೆ ಪ್ರಾರ್ಥನೆಯೇ ಪ್ರಬಲ ಅಸ್ತ್ರ. ಭಗವಂತನ ಸಮರ್ಪಣ ತೀವ್ರತೆಯ ಭಾವದಲ್ಲಿ ನಾನು ಎಂಬುದು ನಮ್ಮೊಳಗೆ ಲೀನವಾಗುತ್ತದೆ.

ಹೊಸ ಪರಿಸರಕ್ಕೆ ಹೊಕ್ಕಾಗ...

–ಸುಹಾಸಿನಿ ಕೌಲಗಿ

(ಜೂನ್ ತಿಂಗಳ ಮೊದಲ ವಾರದಲ್ಲಿ ಶ್ರೀಲಂಕೆಗೆ ಭೇಟಿ ಕೊಟ್ಟಿದ್ದ ಪ್ರವಾಸದ ಅನುಭವ ಇಲ್ಲಿದೆ.)

ಕಳೆದ ವಾರ ಒಂದು ಸಂಸ್ಥೆಯ ಮುಖಾಂತರ ಶ್ರೀಲಂಕಾ ಪ್ರವಾಸಕ್ಕೆ ಹೋಗಿದ್ದೇವು. ಇದು ನನ್ನ ಮೊದಲ ವಿದೇಶಿ ಪ್ರವಾಸವಾಗಿತ್ತು. ಎಲ್ಲ ಹೊಸ ಮುಖಗಳೊಂದಿಗೆ ಹೊಸ ದೇಶಕ್ಕೆ ತೆರಳಿದ್ದೆ.

ಮಧ್ಯಾಹ್ನ ಒಂದು ಗಂಟೆಗೆ ಮೈಸೂರಿನಿಂದ ಒಬ್ಬಳೇ ಬಸ್ಸು ಹತ್ತಿ ಬೆಂಗಳೂರು ವಿಮಾನ ನಿಲ್ದಾಣ ತಲುಪಿದೆ. ವಿಮಾನ ನಿಲ್ದಾಣದಲ್ಲಿ ನನ್ನೊಟ್ಟಿಗೆ ಬರುವವರನನ್ನು ಕಾಯುತ್ತಾ ಒಬ್ಬಳೇ ಕುಳಿತ್ತಿದ್ದೆ ಕೊನೆಗೆ ಎಲ್ಲರೂ ಭೇಟಿಯಾಗಿ ಮಾತನಾಡಿದೆವು, ಹರಟಿದೆವು, ನಕ್ಕೆವು ಬೇರೆ ಬೇರೆ ವೃತ್ತಿಯಿಂದ, ಬೇರೆ ಬೇರೆ ಸ್ಥಳದಿಂದ ಬಂದಿದ್ದ ನಾವೆಲ್ಲರೂ ಒಂದೇ ಕುಟುಂಬದವರಂತಾದೆವು. ಬರೀ ಒಂದೂವರೆ ತಾಸಿನಲ್ಲಿ ಶ್ರೀಲಂಕಾವನ್ನು ತಲುಪೆಬಿಟ್ಟೆವು. ವಿಜ್ಞಾನ-ತಂತ್ರಜ್ಞಾನದಿಂದ ಪ್ರಪಂಚ ಎಷ್ಟು ಚಿಕ್ಕದಾಗಿಹೋಗಿದೆ ಅಲ್ಲವೇ! ಇದೇ ಲಂಕಾವನ್ನು ತಲುಪಲು ರಾಮಾಯಣದಲ್ಲಿ ಎಷ್ಟು ಹರಸಾಹಸ ಮಾಡಿದ್ದರೆಂದು ನಮಗೆ ತಿಳಿದ ವಿಷಯವೇ.

ಶ್ರೀಲಂಕಾದ ಒಂದು ಪರಿಸರ

ನಮ್ಮ ಭಾರತಕ್ಕೆ ಹೋಲಿಸಿದರೆ ಶ್ರೀಲಂಕಾ ಬಹಳ ಪುಟ್ಟದೇಶ. ಪುಟ್ಟದಾದರೂ ಬಹಳ ಚೊಕ್ಕದೇಶ ಎನ್ನಬಹುದು. ಬಂದೊಡನೆ ಮನಸ್ಸಿಗೆ ಅಹ್ಲಾದಕರವನ್ನೂ ಕಣ್ಣಿಗೆ ಆನಂದವನ್ನೂ ತುಂಬುವ ಪರಿಸರ. ರಸ್ತೆಯ ಅಕ್ಕ ಪಕ್ಕದಲ್ಲಿ ನೀರಿನ ಹಳ್ಳ ಅದರ ತುಂಬಾ ತಾವರೆ ನೈದಿಲೆ ನಮ್ಮನ್ನು ಆ ಸುಂದರ ದೇಶಕ್ಕೆ ಆದರದಿಂದ ಸಂತಸದಿಂದ ಅಹ್ವಾನಿಸುತ್ತಿವೆಯೇನೋ ಎಂದು ಭಾಸವಾಯಿತು. ರಾಮಾಯಣದಲ್ಲಿ ಲಂಕಾ ನಗರದ ವರ್ಣನೆಯಿದೆ ಅದು ಸತ್ಯವೆಂದು ಅನಿಸಿತು. ಇಡೀ ಪ್ರಪಂಚವೇ ಪ್ಲಾಸ್ಟಿಕ್ ಮಯವಾಗಿರುವ ಈ ಕಾಲದಲ್ಲಿ ಶ್ರೀಲಂಕಾ ತನ್ನ ಪರಿಸರವನ್ನು ಬಹಳ ಸ್ವಚ್ಛವಾಗಿ ಕಾಪಾಡುತ್ತಿದೆ. ಉದಾಹರಣೆಗೆ ನಗರಗಳ ಮಧ್ಯಭಾಗದಲ್ಲಿ ನದಿ ಇದ್ದರೆ ಅದನ್ನು ಹಾಗೇ ಉಳಿಸಿಕೊಂಡು ಅದಕ್ಕೆ ಒಂದು ಸುಂದರ ಸೇತುವೆಯನ್ನು ನಿರ್ಮಿಸಿರುತ್ತಾರೆ. ಅದೇ ನಮ್ಮ ದೇಶದಲ್ಲಿ ಆಗಿದ್ದರೆ ಎರಡು ಮೂರು ದಶಕಗಳಲ್ಲಿ ಅಲ್ಲ ಕೇವಲ

ಎರಡು ಮೂರು ವರ್ಷಗಳಲ್ಲಿ ನದಿಯನ್ನು ದೊಡ್ಡ ಚರಂಡಿಯಾಗಿಯೋ ಅಥವಾ ನದಿಯ ಸುಳಿವೇ ಸಿಗದಂತೆ ಅಪಾರ್ಟಮೆಂಟುಗಳನ್ನು ನಿರ್ಮಿಸಿಬಿಟ್ಟಿರುತ್ತಿದ್ದರು.

ಹಲವು ಸ್ಥಳಗಳ ವಿಸ್ಮಯ ನೋಟಗಳು ಮರೆಯದೆ ನನ್ನ ಮನಃಪಟಲದಲ್ಲಿ ಅಚ್ಚುಳಿದಿವೆ. ಅವುಗಳಲ್ಲಿ ಸಿಗಿರಿಯಾ, ಮಾಹಾ ಬೋಧಿ.

ಸಿಗಿರಿಯಾ ಒಂದು ವಿಸ್ಮಯ ನೋಟ

ಸಿಗಿರಿಯಾ ಒಂದು ದೈತ್ಯಾಕಾರದ ಏಕಶಿಲಾ ಬಂಡೆ. ತನ್ನ ಸ್ಥಿರ ಗಂಭೀರ ಸ್ಥಿತಿಯಲ್ಲಿ ನಿಂತಿದೆ. ಸುತ್ತಲೂ ಯಾವ ಬೆಟ್ಟ ಗುಡ್ಡಗಳಿಲ್ಲದ ಕಾರಣ ಕಣ್ಣಿಗೆ ಅದ್ಭುತವಾಗಿ ಕಾಣುತ್ತಿತ್ತು. ದೂರದಲ್ಲಿ ಹತ್ತಲು ಬಹಳ ಸುಲಭ ಚಿಕ್ಕದಾಗಿ ತೋರಿದ ಬಂಡೆ ಹತ್ತಿರತ್ತಿರಕ್ಕೇ ಹೋದಂತೆ ತನ್ನ ಬೃಹದಾಕಾರ ಹೆಚ್ಚಿಸುತ್ತಿದೆಯೆನೋ ಎಂದೆನಿಸುತಿತ್ತು. ಆ ಸ್ಥಳವು ಕಾಸಪ್ಪ ಎಂಬ ರಾಜನ ಸಂಸ್ಥಾನ ಮತ್ತು ಅರಮನೆಯಿದ್ದ ಜಾಗ. ಬಂಡೆ ತಲುಪುವ ಮುಂಚೆ ಅಕ್ಕ ಪಕ್ಕದಲ್ಲಿ ಕೊಳಗಳು, ಉದ್ಯಾನವನಗಳು ಮಧ್ಯದಲ್ಲಿ ಒಂದು ವಿಶಾಲವಾದ ಮಣ್ಣಿನ ರಸ್ತೆ, ಬಂಡೆ ಹತ್ತಲು ಮೆಟ್ಟಿಲುಗಳು ಹತ್ತುತ್ತಾ ಸಾಗಿದಂತೆ ಉಪಯೋಗಿಸಿ ನಿರ್ಮಿಸಿರುವುದಂತೆ, ಅದರ ಈಚೆಗೆ ಬಂಡೆಯ ಮೇಲೆ ರತಿಯರ ಲೀಲಾ ಕ್ರೀಡೆಗಳ ಚಿತ್ರಗಳಿದ್ದವು ಆ ಸ್ಥಳ ರಾಜ ರಾಣಿಯರು ಏಕಾಂತದಲ್ಲಿ ಕಳೆವ ಸ್ಥಳವಾಗಿತಂತೆ. ಹಾಗೇ ಮೇಲೇರಿದರೆ ಸಿಂಹದ ಪಾದದಾಕೃತಿಯ ಮಧ್ಯಭಾಗದಿಂದ ಮೆಟ್ಟಿಲು ಹಾದು ಬಂಡೆಯ ತುಟ್ಟತುದಿಯ ವಿಶಾಲವಾದ ಒಂದು ಮಾಯಾಲೋಕಕ್ಕೆ ಕೊಂಡೋಯುತ್ತದೆ. ಸುಯ್ಯೋ ಎಂದು ಬೀಸುವ ಗಾಳಿಗೆ ನಮ್ಮನ್ನೇ ಹಾರಿಸಿದರೆ ಗಾಳಿಪಟದಂತೆ ಸಲೀಸಾಗಿ ಹಾರಬಹುದಿತ್ತು. ಅಷ್ಟು ರಭಸವಾಗಿ ಗಾಳಿ ಬೀಸುತ್ತಿತ್ತು. ಅಲ್ಲಿ ನಿಂತು ಕೆಳಗೆ ನೋಡಿದ ನನಗೆ ಆ ಮಣ್ಣಿನ ರಸ್ತೆ, ಸುತ್ತಲ ಹಸಿರು ಒಬ್ಬ ಸುಂದರ ಹೆಣ್ಣುಮಗಳು ಮಧ್ಯ ಬೈತಲೆ ತೆಗೆದು ಎಣ್ಣೆ ಹಚ್ಚಿ ತಲೆಬಾಚಿರುವಂತೆ ಭಾಸವಾಯಿತು. ಅದು ಬಿಡಿ ಬಂಡೆ ಮೇಲ್ಭಾಗದ ವರ್ಣನೆಗೆ ಬರೋಣ. ಕ್ರಿ.ಪೂ ೬-೭ ಶತಮಾನದಲ್ಲಿ ಅಲ್ಲಿ ಅರಮನೆ ಇತ್ತಂತೆ, ಅಂತೆ ಕಂತೆಯ ಮಾತು ಎನ್ನಲಾಗುವುದಿಲ್ಲ ಏಕೆಂದರೆ ಪುರಾವೆಗೆ ಅಲ್ಲಿ ಶಿಥಿಲವಾಗಿ ಬಿದ್ದಿರುವ ಇಟ್ಟಿಗೆ, ಕಲ್ಲು, ಗೋಡೆಗಳು ಸಾಕ್ಷಿಯಾಗಿವೆ. ಒಂದು ಶುಭ್ರವಾದ ಕೊಳವೂ ಇದೆ, ಒಂದಷ್ಟು ಮರಗಳೂ ಇವೆ. ಅದನೆಲ್ಲ ನೋಡಿದಾಗ ಏನೀ ದೇವರ ಸೃಷ್ಟಿ ಎಂದು ರೋಮಾಂಚನವಾಯಿತು. ಒಂದು ಕ್ಷಣ ಕಣ್ಣು ಮುಚ್ಚಿ ತೆರೆದೆ ನಾನೇ ಆ

ಕಾಲದಲ್ಲಿ ರಾಣಿಯಾಗಿದ್ದರೇ ಎಂದು ನೆನೆದೆ ಮರುಕ್ಷಣ ಕ್ಷಿಥಿಲವಾಗಿ ನೆಲಸಮ ಆಗಿದ್ದ ಗೋಡೆಗಳು ತನ್ತಾನೆ ಕಟ್ಟಲಾರಂಭಿಸಿದವು, ಬಣ್ಣಮಯವಾಯಿತು. ಅರಮನೆ, ದೀಪ ಕಂಬಗಳು ತೂಗಾಡಿದವು. ಅರಮನೆ ಅಲಂಕಾರಗೊಂಡಿತು, ಜನರಿಂದ ಜೀವತುಂಬಿಕೊಂಡಿತು ನನ್ನ ಕಲ್ಪನೆಗೆ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಊಹಿಸಿ ಅದೇ ಲೋಕದಲ್ಲಿ ಮುಳುಗಿಹೋಗಿದ್ದೆ. ಯಾರೋ ನನ್ನನ್ನು ಕೂಗಿದಾಗಲೇ ಪ್ರಸ್ತುತ ಜಂಜಾಟದ ಬದುಕಿಗೆ ಹಿಂದಿರುಗೆದೆ. ನಿಜವಾಗಿಯೂ ಅಚ್ಚರಿಯ ವಿಷಯವೆಂದರೆ ಆ ಬಂಡೆಯ ಮೇಲೆ ಅರಮನೆಯನ್ನು ನಿರ್ಮಿಸಲು ಆಗಿನ ಕಾಲದಲ್ಲಿ ಜನರು ಎಷ್ಟು ಕಷ್ಟಪಟ್ಟಿರಬಹುದುದೆಂದು ಈ ವಿಷಯ ಮಾತ್ರ ಅಚ್ಚರಿಯ ಮನದಲ್ಲಿ ಹಾಗೆ ಉಳಿದು ಬಿಟ್ಟಿತು. ಇದು ಒಂದು ಜಾಗದ ವಿವರಣೆಯಾದರೆ ಮತ್ತೊಂದು ಮಹಾಬೋಧಿ.

ಮಹಾಬೋಧಿ

ಶ್ರೀಲಂಕಾದಲ್ಲಿ ಎಪ್ಪತ್ತು ಭಾಗ ಬೌದ್ಧಧರ್ಮದವರಿದ್ದಾರೆ. ಆ ದೇವಸ್ಥಾನವನ್ನು ಹೊಕ್ಕಾಗ ಹೊಸ ಅನುಭವವೇ ಆಯಿತು. 'ಆಸೆಯೇ ದುಃಖಕ್ಕೆ ಮೂಲ' ಎಂದು ಬೋಧಿಸಿದ ಬುದ್ಧನ ದೇವಸ್ಥಾನವದು. 'ಎಲ್ಲವೂ ಶೂನ್ಯ ಎಂದವನಾತ. ಒಂದೇ ಪದವಾದರು ಅದನ್ನು ಅರಿಯುತ್ತಾ ಹೋದಲ್ಲಿ ಆಕಾಶದಲ್ಲಿ ನಕ್ಷತ್ರವನ್ನು ಎಣಿಸಿದಂತಾಗುತ್ತದೆ. ಅರಿಯುವುದು ಏನಿದೆ? ಎಲ್ಲವೂ ಶೂನ್ಯವಾದಾಗ...! ಇದನ್ನು ಬಿಡಿ ಅಲ್ಲಿಯ ವಾತಾವರಣಕ್ಕೆ ಬರೋಣ, ಆ ದೊಡ್ಡ ಅರಳಿಮರ, ಬುದ್ಧ ಪ್ರಥಿಮೆ, ದೇವಸ್ಥಾನದ ಸುತ್ತಾ ಸಿಮೆಂಟ್ ನೆಲ ನಿರ್ಮಿಸದೆ ಮರಳನ್ನು ಹಾಗೆ ಬಿಟ್ಟಿರುವುದು ಚಂದ ಕಾಣುತ್ತಿತ್ತು. ಬಿಳಿಯ ವಸ್ತ್ರ ಧರಿಸಿ ಜನರು ಬರುತ್ತಾರೆ. ಕಮಲ, ನೈದಿಲೆಗಳನ್ನು ಬುದ್ಧನಿಗೆ ಅರ್ಪಿಸುತ್ತಾರೆ, ಬೋಧಿ ವೃಕ್ಷಕ್ಕೆ ನೀರೆರೆಯುತ್ತಾರೆ. ಒಂದು ಗಮನಿಸಿದ ವಿಷಯ ನನಗೆ ಹಿಡಿಸಿದ ವಿಷಯವೆಂದರೆ ಅಲ್ಲಿ ಇಲ್ಲಿ ಕುಳಿತು ಒಬ್ಬೊಬ್ಬರೇ ತಮ್ಮ ಪಾಡಿಗೆ ಗಲಾಟೆ ಮಾಡದೆ ಶ್ಲೋಕಗಳನ್ನು ಪಠಿಸುತ್ತಿರುತ್ತಾರೆ. ಅಲ್ಲೇ ಒಂದೆಡೆ ತಾಯಿ ತನ್ನ ಮೂವರು ಮಕ್ಕಳೊಂದಿಗೆ ಕೂತು ಶ್ಲೋಕ ಹೇಳುತ್ತಿದ್ದರು ನಾನು ಅವರನ್ನು ಗಮನಿಸುತ್ತಾ ಪಕ್ಕ ಕುಳಿತೆ. ಕೊನೆಯ ಮಗು ನನ್ನತ್ತ ನೋಡಿ ಮುಗ್ಧ ನಗೆ ಬೀರಿತು. ಎಲ್ಲಾ ಶ್ಲೋಕವನ್ನು ಪುಸ್ತಕವನ್ನು ನೋಡದೆ ಹೇಳುತ್ತಿತ್ತು. ಆದರೆ ಅದರ ಅಣ್ಣ ತನ್ನದೇ ಲೋಕದಲ್ಲಿ ಮುಳುಗಿದ್ದ ಮುಕದಲ್ಲಿ ಮುಗ್ಧತೆ ಇಲ್ಲದೆ ತಾತ್ಸಾರ ಕಾಣುತ್ತಿತ್ತು. ಬುದ್ಧ ಒಬ್ಬನಿಗೇ ಮುಖವು ಎಷ್ಟು ಬೆಳೆದರೂ ಶಾಂತವಾಗಿ ನಿರ್ಮಲವಾಗಿತ್ತು. ಅದು ಅವನಿಗೆ ಸಾಧ್ಯ.

ಶ್ರೀಲಂಕಾ ಕುಟುಂಬದೊಂದಿಗೆ ಒಂದು ದಿನ

ಎಲ್ಲಾ ದಿನಕ್ಕಿಂತ ಪ್ರಪಂಚದ ಅರಿವಾಗಿದ್ದು ಒಬ್ಬ ಶ್ರೀಲಂಕಾ ಕುಟುಂಬದೊಟ್ಟಿಗೆ ಕಳೆದ ದಿನ. ಇದು ನಮ್ಮ ಪ್ರವಾಸದಲ್ಲಿ ಇದ್ದ ಒಂದು ಚಟುವಟಿಕೆಯಾಗಿತ್ತು. ಸಂಜೆ ಸುಮಾರು ಏಳು ಗಂಟೆಯ ಸಮಯಕ್ಕೆ ನಾನು ಸೇರಿದಂತೆ ಮೂವರು ಹೆಣ್ಣು ಮಕ್ಕಳನ್ನು ಒಂದು ಮನೆಗೆ ತಂದು ಬಿಟ್ಟರು. ಮಾರನೆ ದಿನ ಬೆಳಿಗ್ಗೆ ಎಂಟಕ್ಕೆ ಕರೆದೊಯ್ಯುತ್ತೇವೆಂದು ನನಗಂತೂ ಹೇಗಪ್ಪಾ ಅಲ್ಲಿಂಯುವರೆಗೆ ಸವುಂಯು ಕಳೆಂಯುವುದು ಎಂಬುದೇ ದೊಡ್ಡ ತಲೆನೋವಾಗಿಹೋಗಿತ್ತು. ಆದರೆ ಆ ದಿನ ಬಹಳ ಸುಂದರವಾದ ದಿನ. ನಮ್ಮನ್ನು ಬಹಳ ಆದರದಿಂದ ಸ್ವಾಗತಿಸಿದರು. ನಾವು ಆ ದಿನ ಯಾವ ಸೆಲಿಬ್ರಿಟಿಗೂ ಕಡಿಮೆ ಇರಲಿಲ್ಲ. ನಾವು ವಿದೇಶೀಯರು ಎಂದು ಅಕ್ಕ ಪಕ್ಕದ ಮನೆಯವರೆಲ್ಲಾ ಬಂದು ನಮ್ಮೊಟ್ಟಿಗೆ ಫೋಟೋ ತೆಗೆಸಿಕೊಂಡರು. ಆ ಮನೆಯಲ್ಲಿ ನಾಲ್ಕು ಮಕ್ಕಳಿದ್ದವು ಒಹಸೀ, ವಾಗೀ, ಸಮಾಧಿ ಹಾಗೂ ಅನುರಾಧ್. ನಾನು ಅವರೊಂದಿಗೆ ಕೂಡಿ ರಾತ್ರಿವರೆಗೂ ಚಂಡಾಟವಾಡಿದೆ. ಮಕ್ಕಳು ಶಾಲೆಯಲ್ಲಿ ಬಂದಿದ್ದ ಬಹುಮಾನಗಳನ್ನೆಲ್ಲಾ ತೋರಿಸಿದರು. ನನಗೆ ಕನ್ನಡ ಭಾಷೆ ಬಿಟ್ಟರೇ ಬೇರೆ ಭಾಷೆ ಅಷ್ಟಕ್ಕೆ ಅಷ್ಟೇ. ಆ ಮನೆಯವರಿಗೆ ಸಿಂಗಳಿ ಭಾಷೆ ಬಿಟ್ಟರೆ ಮತ್ಯಾವ ಭಾಷೆಯೂ ಬರುವುದಿಲ್ಲ. ಆಧರೂ ನಮ್ಮ ಸಂಭಾಷಣೆಯೇನೋ ಕಡಿಮೆಯೇನೂ ಆಗಿರಲಿಲ್ಲ. ಅಂಗಾಂಗ ಚಲನೆ, ಮುಖದ ಮೇಲಿನ ಭಾವನೆಗಳಿಂದ ವ್ಯಕಗತಪಡಿಸುತ್ತಿದ್ದೇವು. ಇದು ನನಗಂತೂ ಬಹಳ ಸುಲಭವೇ ಆಯಿತು ಯಾಕೆಂದರೆ ಭರತನಾಟ್ಯ ನರ್ತಕಿಯಾಗಿರುವುದರಿಂದ ಭಾಷೆ ಇಲ್ಲದೆ ಭಾವನೆಗಳನ್ನು ವ್ಯಕ್ತಪಡಿಸುವುದು ತಿಳಿದ ವಷಯವೇ ಆಗಿತ್ತು. ಆದ್ದರಿಂದ ನನಗದು ಬೇರೆಯವರಿಗಿಂತ ಸುಲಭದ ವಿಚಾರವಾಗಿತ್ತು. ಬರೆಯಲು, ತಿಳಿಯಲು ಮನಸ್ಸಿರ ಬೇಕೇ ವಿನಃ ಭಾಷೆ ಮುಖ್ಯವಲ್ಲವೆಂದು ಆಳವಾಗಿ ಅನಿಸಿತು. ಆ ಕ್ಷಣ ನಾನು ಪ್ರಪಂಚದ ಯಾವ ಭಾಗದಲ್ಲಾದರೂ ಬದುಕಬಲ್ಲೆ ಎಂಬ ಆತ್ಮವಿಶ್ವಾಸ ಬಂದಿತು.

ಒಂದು ಚಿಕ್ಕ ಸನ್ನಿವೇಶ ನನ್ನ ಮನದಾಳಕ್ಕೆ ಹೊಕ್ಕಿ ಗೊಂದಲವನ್ನು ಮೂಡಿಸಿತು. ಆ ಶ್ರೀಲಂಕಾ ಕುಟುಂಬದೊಡನೆ ಕಾಲ ಕಳೆದು ಮಲಗುವ ಸಮಯ ಬಂದಾಗ ನಾವು ಮೂವರೂ ಒಂದು ಕೊಠಡಿಗೆ ತೆರಳಿದೆವು. ಅವರಿಬ್ಬರು ಬಾಗಿಲನ್ನು ಸರಿಯಾಗಿ ಮುಚ್ಚಬೇಕು ನಮ್ಮ ಎಚ್ಚರಕೆಯಲ್ಲಿ ನಾವಿರಬೇಕು ಯಾರನ್ನೂ ನಂಬಲಾಗುವುದಿಲ್ಲ ಎಂದು ಬಾಗಿಲನ್ನು ಬಿಗಿದರು. ಆ ಘಳಿಗೆ ನನಗೆ ಬಹಳ ಅಚ್ಚರಿ, ಗೊಂದಲ ತಂದಿತು. ಇದು ಚಿಕ್ಕ

ಉದಾಹರಣೆಯಾದರೂ ಆಳವಾಗಿ ನೋಡಿದ್ದಲ್ಲಿ ಹೇಗೆ ಇಡೀ ಜಗತ್ತು ನಡೆಯುತ್ತಿದೆ ಎಂದು ತಿಳಿಯಬಹುದೇನೋ. ಅಷ್ಟು ಸತ್ಕರಿಸಿದ ಆ ಕುಟುಂಬದವರನ್ನು ಸಂದೇಹದಿಂದ ನೋಡಿದ್ದು. ನಮ್ಮ ನೆರೆಯ ಮಿತ್ರ ರಾಷ್ಟ್ರವಾದ ಶ್ರೀಲಂಕಾದ ಜನರನ್ನೇ ನಾವು ನಂಬಲಿಲ್ಲ. ಇನ್ನು ಪಾಕಿಸ್ತಾನಕ್ಕೆ ಹೋಗಿದ್ದರೆ ಏನು ಗತಿ!.. ಆಧುನಿಕತೆ, ವಿಜ್ಞಾನ ಬೆಳೆದಂತೆಲ್ಲಾ ಯುನಿಕಲ್ಚರ್ ಪ್ರಪಂಚವಾಗುತ್ತಿದೆ ಆದರೆ ನಂಬಿಕೆ ಅನ್ನುವುದೇ ನಾಶವಾಗುತ್ತಿದೆ. ತಮ್ಮ ಪಾಡಿಗೆ ತಾವು ಸಾಗುತ್ತಿದ್ದಾರೆಯೇ ವಿನಃ ಪಕ್ಕ ಕೂತವರನ್ನು, ನಕ್ಕವರನ್ನು, ಮಾತನಾಡಿಸಿದವರನನು ಯಾರನ್ನು ಯಾರೂ ನಂಬುತ್ತಿಲ್ಲ!

ಯಾವುದು ತಪ್ಪು ಯಾವುದು ಸರಿ ಎಂದು ಹೇಳಲಾಗುವುದಿಲ್ಲ ಎಲ್ಲವೂ ಆ ಪ್ರಸ್ತುತ ಸಮಯಕ್ಕೆ ಅವರವರ ಪ್ರಕ್ರಿಯೆ ಅಷ್ಟೆ. ನಾನು ಬೆಳೆದ ವಾತವರಣ ಬಹಳ ಪ್ರೀತಿ, ಸ್ನೇಹ, ಕಾಳಜಿ, ನಂಬಿಕೆಯದು. ಆದರೆ ನಿಜವಾದ ಹೊರ ಪ್ರಪಂಚ ಇರುವುದೇ ಬೇರೆಯ ರೀತಿ. ನನಗೆ ಈ ಪ್ರವಾಸ ಜೀವನಕ್ಕೆ ಅನೇಕ ಪಾಠಗಳನ್ನು ಕಲಿಸಿತು. ಕೊನೆಯ ಸಾಲಾಗಿ ನನಗೆ ಆಳವಾಗಿ ಅನಿಸಿದ್ದು, ಇಡೀ ಪ್ರಪಂಚ ಭ್ರಮೆಯಿಂದಲೇ ಸಾಗುತ್ತಿದೆ... ಆದ್ದರಿಂದಲೇ ಇನ್ನೂ ಜೀವಂತವಾಗಿದೆ!!!

ಮದ್ಯಪಾನ ನಿಷೇಧಕ್ಕಾಗಿ ಒತ್ತಾಯ

(ಮದ್ಯಪಾನ ನಿಷೇಧ ಒತ್ತಾಯಿಸಿ ಹೊರಟ ಜಾಥಾದ ಉದ್ಘಾಟನೆಯ ಸಂಧರ್ಭದಲ್ಲಿ ಮಂಡಿಸಿದ ವಿಚಾರಗಳು - ಸ್ವಾತಂತ್ರ್ಯಸೌಧ ಶಿವಪುರ ೫-೬-೧೭)

ಇದೇ ತಾಲ್ಲೂಕಿನ ಮರಳಿಗ ಗ್ರಾಮದ ಗ್ರಾಮಸ್ಥರು ತಮ್ಮ ಗ್ರಾಮದಲ್ಲಿ ಮದ್ಯದ ಅಂಗಡಿ ತೆರೆಯಬಾರದೆಂದು ನಡೆಸಿದ ಪ್ರತಿಭಟನೆಯ ಫಲವಾಗಿ ಗೂಂಡಾ ಕಾಯ್ದೆ ಅನ್ವಯ ಪೋಲಿಸರು ಅವರ ವಿರುದ್ಧ ದೂರು ದಾಖಲಿಸಿದ್ದಾರೆ. ಇದು ಖಂಡನೀಯ. ರಾಜ್ಯದಲ್ಲಿರುವ ಕಾಂಗ್ರೆಸ್ ಪಕ್ಷದ ಸರ್ಕಾರಕ್ಕೆ ಇದು ಭೂಷಣ ತರುವ ಕೆಲಸವಲ್ಲ. ಮೊನ್ನೆಯಷ್ಟೆ ಮೈಸೂರಿನಲ್ಲಿ ತನ್ನ ನಾಲ್ಕು ವರ್ಷದ ಸಾಧನೆಯನ್ನು ವೈಭವೀಕರಿಸಲು ಕರೆದಿದ್ದ ಎಂಟು ಜಿಲ್ಲೆಗಳ ಜನರನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿಯವರು ಮದ್ಯಪಾನ ನಿಷೇಧದ ಬಗ್ಗೆ ಮತ್ತು ರೈತರ ಸಾಲ ಮನ್ನಾದ ಬಗ್ಗೆ ಏನನ್ನೂ ಮಾತನಾಡದಿರುವುದು ಸರ್ಕಾರದ ಜನಹಿತವಲ್ಲದ ಧೋರಣೆಯನ್ನು ತೋರಿಸುತ್ತದೆ. ಸರ್ಕಾರ ಪ್ರದರ್ಶಿಸಿದ ಸಕಲ ವೈಭವವೂ ಅರ್ಥಹೀನವಾಗಿದೆ. ಎಲ್ಲಿಯವರೆಗೆ ರಾಜ್ಯದಲ್ಲಿ ಮದ್ಯಪಾನ ಸಹಜವಾಗಿರುತ್ತದೋ ಅಲ್ಲಿಯವರೆಗೆ ಸರ್ಕಾರ ಕೊಡುವ ಎಲ್ಲ ಸೌಭಾಗ್ಯಗಳೂ ದೌರ್ಭಾಗ್ಯವಾಗುತ್ತವೆ!

೧೯೦೯ ರಲ್ಲಿ ಗಾಂಧೀಯವರು ಇನ್ನೂ ಜನಪ್ರೀಯ ವ್ಯಕ್ತಿಯಾಗದೆ ಇದ್ದಾಗ, ನಾಯಕನಾಗದೆ ಇದ್ದಾಗಲೇ, ದಕ್ಷಿಣ ಆಫ್ರೀಕಾದ ಪ್ರೆಟೋರಿಯಾ ಜೈಲಿನಿಂದ ಟ್ರಾನ್ಸವಾಲ್ ಲಿಕರ್ ಕಮೀಷನ್‌ಗೆ ಭಾರತೀಯರಲ್ಲಿ ಮತ್ತು ಇಂಗ್ಲೀಷ್‌ರಲ್ಲಿ ಮದ್ಯಪಾನದಿಂದ ಆಗುತ್ತಿದ್ದ ಸಾಮಾಜಿಕ ಮತ್ತು ಆರ್ಥಿಕ ದುಷ್ಪರಿಣಾಮಗಳ ಬಗ್ಗೆ ಪತ್ರ ಬರೆದು ಮದ್ಯಪಾನವನ್ನು ನಿಷೇಧ ಮಾಡಬೇಕೆಂದು ತಿಳಿಸಿದ್ದರು.

೧೯೨೦ ರಿಂದ ಕಾಂಗ್ರೆಸ್ ಪಕ್ಷ ಮದ್ಯಪಾನ ನಿಷೇಧವನ್ನು ತನ್ನ ಪ್ರಮುಖ ಕಾರ್ಯಕ್ರಮವನ್ನಾಗಿಸಿಕೊಂಡಿತು. ಗಾಂಧೀಜಿ ಹೂಡಿದ್ದ ಅಸಹಕಾರ ಚಳುವಳಿಯೊಂದಿಗೆ ಮದ್ಯದ ಅಂಗಡಿಗಳನ್ನು ಮುಚ್ಚಿಸುವ ಕೆಲಸವನ್ನು ಮಾಡಿತು. ಮದ್ಯಪಾನ ನಿಷೇಧದ ಕಾರ್ಯಕ್ರಮದ ಜವಾಬ್ದಾರಿಯನ್ನು ಪಕ್ಷದ ಹಿರಿಯ ನಾಯಕ ಸಿ. ರಾಜಗೋಪಾಲಚಾರಿಯವರಿಗೆ ವಹಿಸಿಕೊಡಲಾಗಿತ್ತು. ವೃದ್ಧ ಪಿತಾಮಹ, ಕಾಂಗ್ರೆಸ್ ನಾಯಕ ಎಂದು ಹೆಸರಾಗಿದ್ದ ದಾದಾಭಾಯಿ ನವರೋಜಿ ಈ ಆಂದೋಲನದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ಅಂದು ಕಾಂಗ್ರೆಸ್ಸಿಗರು ಮಾಡಬೇಕಿದ್ದ ಹದಿನೆಂಟು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಮದ್ಯಪಾನ ನಿಷೇಧದ ಪ್ರಚಾರವೂ ಒಂದಾಗಿತ್ತು. ನಂತರ ಗಾಂಧೀ ಜನನಾಯಕರಾದ ಮೇಲೆ ಮತ್ತು ದೇಶವು ಅವರನ್ನು ಮಹತ್ಮ ಎಂದು ಕರೆದಾದ ಮೇಲೆ ಅವರು ಮದ್ಯಪಾನ ನಿಷೇಧದ ಬಗ್ಗೆ ಹೇಳಿರುವ

ಮಾತುಗಳನ್ನು ನಮ್ಮ ರಾಜ್ಯಸರ್ಕಾರ ಗಮನಿಸಬೇಕು.

೧. ನಮ್ಮ ಮಧ್ಯೆ ಸಾವಿರಾರು ಕುಡುಕರು ಇರುವುದಕ್ಕಿಂತ ಭಾರತ ದಿವಾಳಿಯಾಗುವುದನ್ನು ನಾನು ಇಷ್ಟಪಡುತ್ತೇನೆ. ದೇಶವನ್ನು ಮದ್ಯಪಾನ ಮುಕ್ತ ಮಾಡಲು ದೇಶವು ಶಿಕ್ಷಣ ರಹಿತವಾಗಿರಬೇಕಾಗಿ ಬಂದರೆ ಆ ಬೆಲೆಯನ್ನು ತೆತ್ತಲು ಸಿದ್ಧನಿದ್ದೇನೆ (ಯಂಗ್ ಇಂಡಿಯಾ ೧೯೨೭)

೨. ನನ್ನನ್ನು ಕೇವಲ ಒಂದೆರಡು ಗಂಟೆಕಾಲ ದೇಶದ ಸರ್ವಾಧಿಕಾರಿಯನ್ನಾಗಿ ಮಾಡಿದರೆ ಯಾವುದೇ ಪರಿಹಾರ ಕೊಡದೇ ಮದ್ಯದ ಅಂಗಡಿಗಳನ್ನು ಮುಚ್ಚಿಸುತ್ತೇನೆ ಮತ್ತು ಉಪ್ಪಿನ ಮೇಲಿನ ತೆರಿಗೆಯನ್ನು ತೆಗೆದುಹಾಕುತ್ತೇನೆ.

ಮರಳಿಗ ಗ್ರಾಮಸ್ಥರು ರಾಷ್ಟ್ರಪಿತ ಮಹತ್ಮಗಾಂಧೀಜಿಯವರು ಹೇಳಿದ್ದ ಮಾತುಗಳಂತೆ ಮತ್ತು ಆಶಯಗಳಂತೆ ಮದ್ಯಪಾನದ ದುಷ್ಪರಿಣಾಮಗಳ ವಿರುದ್ಧ ಹೋರಾಟ ನಡೆಸಿದ್ದಾರೆ. ಅವರು ಪ್ರಯತ್ನಿಸಿದ್ದು ಸಮಾಜ ಸುಧಾರಣೆಯ ಕೆಲಸವೇ ಹೊರೆತು ಯಾವುದೇ ಲೂಟಿಯ ಕೆಲಸವಲ್ಲ. ಆದ್ದರಿಂದ ಮರಳಿಗ ಗ್ರಾಮಸ್ಥರ ಮೇಲಿನ ಪೋಲಿಸ್ ದೂರನ್ನು ತಕ್ಷಣ ಸರ್ಕಾರ ಹಿಂದಕ್ಕೆ ಪಡೆಯಬೇಕು.

ಅಲ್ಲದೆ ಕರ್ನಾಟಕ ರಾಜ್ಯದಲ್ಲಿ ಮದ್ಯಪಾನ ನಿಷೇಧವನ್ನು ಜಾರಿಗೆ ತರಬೇಕು ಈ ವಿಷಯದಲ್ಲಿ ಬಿಹಾರ್ ರಾಜ್ಯ ಸರ್ಕಾರದ ಕ್ರಮ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಮಾದರಿಯಾಗಬೇಕು.

ಮದ್ಯಪಾನ ನಿಷೇಧ ಬೇಕೆಂದು ಈಗಾಗಲೇ ಹೈದರಾಬಾದ್ ಕರ್ನಾಟಕದಲ್ಲಿ ಬಲವಾದ ಕೂಗು ಎದ್ದಿದೆ. ಹಳೆಯ ಮೈಸೂರು ರಾಜ್ಯದಲ್ಲಿಯೂ ಕೂಗು ಎದ್ದಿದೆ. ಜನ ಎಚ್ಚೆತ್ತು ಕೊಂಡಿದ್ದಾರೆ. ಮದ್ಯಪಾನ ನಿಷೇಧವನ್ನು ಈ ರಾಜ್ಯ ಸರ್ಕಾರ ಮಾಡದೇ ಇದ್ದಲ್ಲಿ

ಅಹಿಂದಕ್ಕೆ ಸಂಬಂಧಿಸಿದ ಓಲೈಕೆಯ ಬಣ್ಣದ ಎಷ್ಟೇ ಮಾತುಗಳನ್ನಾಡಿದರೂ ಅದನ್ನು ಲೆಕ್ಕಿಸದಿರುವ ರಾಜ್ಯದ ಜನತೆಯಿಂದ ಮುಂಬರುವ ಚುನಾವಣೆಯಲ್ಲಿ ಕಾಗ್ರೇಸ್ ವಿರೋಧವನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಮುಖ್ಯಮಂತ್ರಿಯವರು ಗಮನಿಸಬೇಕು. ಏಕೆಂದರೆ ಅಹಿಂದ ಒಳಗೊಂಡಿರುವ ಎಲ್ಲ ಸಮುದಾಯಗಳಲ್ಲಿ ಮದ್ಯವ್ಯಸನಿಗಳಿದ್ದಾರೆ ವ್ಯಸನದ ಕಾರಣದಿಂದಾಗಿ ಸರ್ಕಾರವು ಕೊಡುತ್ತಿರುವ ಸೌಲಭ್ಯಗಳು ಬೊರ್ಗಲ್ಲ ಮೇಲೆ ನೀರು ಸುರಿದಂತಾಗುತ್ತಿದೆ.

ಇಂದಿನಿಂದ ಪ್ರಾರಂಭವಾಗಿರುವ ಜಾಥಾಕ್ಕೆ ಮತ್ತು ಜಾಥಾದಲ್ಲಿ ಭಾಗವಹಿಸಿರುವ ಎಲ್ಲ ಬಂಧುಗಳಿಗೆ ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಅವರ ಪ್ರಯತ್ನಕ್ಕೆ ಯಶಸ್ವಿ ಸಿಗಲಿ ಎಂದೂ ಪ್ರಾರ್ಥಿಸುತ್ತೇನೆ. ರಾಜ್ಯದಲ್ಲಿ ಮದ್ಯಪಾನ ನಿಷೇಧ ಕಾನೂನು ಜಾರಿಗೆ ಬರಲಿ ಎಂದೂ ಹಾರೈಸುತ್ತೇನೆ.

–ಸುರೇಂದ್ರ ಕೌಲಗಿ

ಸರ್ವೋದಯ ಆಂದೋಲನ ಮುನ್ನಡೆ

ಗಾಂಧೀಜಿಯ ನಂತರ ಇಡೀ "ದೇಶದಲ್ಲಿ ಜೀವನನಿಷ್ಠೆ ಇಟ್ಟುಕೊಂಡು ಕೆಲಸ ಮಾಡುವಂಥ ಒಂದು ಸೇವಕ ವರ್ಗ ಸತತವಾಗಿ ಇರಲಿ ಮತ್ತು ಅದರ ಮೂಲಕ ಸಮಾಜದ ಯೋಗ್ಯ ರಚನೆಯಾಗಲಿ ಎಂಬುದೇ ನನ್ನ ವಿಚಾರ" ಎಂಬುದಾಗಿ ವಿನೋಬಾ ೧೯೫೦ ರಲ್ಲಿ ಹೇಳಿದ್ದರು.

ಕಳೆದ ಮಾರ್ಚ್ ೨೩ ಮತ್ತು ೨೪ ನೇ ದಿನಾಂಕಗಳಲ್ಲಿ ಸರ್ವಸೇವಾ ಸಂಘದ ೮೫ನೇ ಅಧಿವೇಶನ ಮತ್ತು ಚಂಪಾರಣ್ ಸತ್ಯಾಗ್ರಹದ ೧೦೦ನೇ ವರ್ಷದ ಐತಿಹಾಸಿಕ ಸ್ಮರಣೆಯ ದಿನಾಚರಣೆಯು ನಡೆಯಿತು. ಅಧಿವೇಶನವು ಶ್ರೀ ಮಹಾದೇವ್ ವಿದ್ರೋಹಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧಿವೇಶನದ ಮುಖ್ಯ ಅತಿಥಿಗಳಾಗಿ ಸೇವಾಗ್ರಾಮ ಗಾಂಧಿ ಆಶ್ರಮದ ಅಧ್ಯಕ್ಷರಾದ ಶ್ರೀ ಜಯವಂತ್ ಮಠಕರ್, ಸರ್ವೋದಯ ಸಮಾಜದ ಸಂಯೋಜಕರಾದ ಶ್ರೀ ಆದಿತ್ಯ ಪಟ್ನಾಯಕ್ ಮತ್ತು ಹಿರಿಯ ಗಾಂಧೀವಾದಿ ಡಾ॥ ರಾಮ್‌ಜೀಸಿಂಹ್ ಹಾಗೂ ಸಂಪೂರ್ಣಕ್ರಾಂತಿ ರಾಷ್ಟ್ರೀಯ ವೇದಿಕೆಯ ಸಂಯೋಜಕರಾದ ಶ್ರೀ ಭವಾನಿ ಶಂಕರ್ ಕುಸುಮ್ ಭಾಗವಹಿಸಿದ್ದರು. ರಾಜಸ್ಥಾನ ಸರ್ವೋದಯ ಮಂಡಲದ ಅಧ್ಯಕ್ಷರಾದ ಆಶಾ ಭೋಥರ್, ಪಶ್ಚಿಮ ಬಂಗಾಲ ಸರ್ವೋದಯ ಮಂಡಲದ ಅಧ್ಯಕ್ಷ ನಾರಾಯಣ್‌ಭಾಯಿ. ತೆಲಂಗಾಣ ಸರ್ವೋದಯ ಮಂಡಲದ ಅಧ್ಯಕ್ಷ ಹಾಗೂ ಪ್ರಥಮ ಭೂದಾನ ದಾತಾ ಶ್ರೀ ರಾಮಚಂದ್ರ ರೆಡ್ಡಿಯವರ ಮೊಮ್ಮಗ ಶ್ರೀ ಅರವಿಂದ ರೆಡ್ಡಿ, ಬಿಹಾರ ಸರ್ವೋದಯ ಮಂಡಲದ ಅಧ್ಯಕ್ಷ ತ್ರಿಭುವನ್ ನಾರಾಯಣ್ ಸಿಂಹ, ಮಹಾರಾಷ್ಟ್ರ ಸರ್ವೋದಯ ಮಂಡಲದ ಅಧ್ಯಕ್ಷ ಪ್ರೋ ಸೋಮನಾಥ ರೂಢೆ, ಮುಂಬೈ ಸರ್ವೋದಯ ಮಂಡಲದ ಅಧ್ಯಕ್ಷ ಜಯಂತ್ ದಿವಾನ್, ಉತ್ತರಪ್ರದೇಶ ಸರ್ವೋದಯ ಮಂಡಲದ ಅಧ್ಯಕ್ಷ ಶ್ರೀ ಮಧುಸೂದನ್, ಛತ್ತೀಸ್ ಘಡ ಸರ್ವೋದಯ ಮಂಡಲದ ಅಧ್ಯಕ್ಷ ಶ್ರೀ ಸಿ.ಯಾರಾಮ್ ಸಾಹು, ಝಾರ್ಖಂಡ್ ಸರ್ವೋದಯ ಮಿತ್ರ ಮಂಡಲದ ಸಂಯೋಜಕ ಶ್ರೀ ವಿನೋದ ರಂಜನ್ ಮುಂತಾದವರು ಅಧಿವೇಶನದಲ್ಲಿ ಉಪಸ್ಥಿತರಿದ್ದು ಭಾಗವಹಿಸಿದರು. ಇದೇ ಅಧಿವೇಶನದಲ್ಲಿ ಅಖಿಲ ಭಾರತ ಸರ್ವೋದಯ ಮಂಡಲದ ಅಧ್ಯಕ್ಷರಾಗಿ ಮಹದೇವ್ ವಿದ್ರೋಹಿಯವರನ್ನು ಸರ್ವಾನುಮತದಿಂದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಮಹಾದೇವ್ ವಿದ್ರೋಹಿಯುವರು ೧೯೬೯ ರಿಂದಲೆ ವಿದ್ಯಾರ್ಥಿ ಜೀವನದಲ್ಲಿದ್ದಾಗಲೇ ಸಾರ್ವಜನಿಕ ಕೆಲಸದಲ್ಲಿ ತೊಡಗಿಸಿಕೊಂಡವರು ಜಯಪ್ರಕಾಶ ನಾರಾಯಣರು ಸ್ಥಾಪಿಸಿದ್ದ "ತರುಣ ಶಾಂತಿ ಸೇನಾ"ದ ಸದಸ್ಯರಾಗಿ ಕೆಲಸ ಮಾಡಿದರು. ತುರ್ತು ಪರಿಸ್ಥಿತಿಯಲ್ಲಿ ನಾಲ್ಕು ಬಾರಿ ಬಂಧಿಸಲ್ಪಟ್ಟು ವಿಶೇಷ ಕೇಂದ್ರಿಯ ಕಾರಾಗೃಹ ಭಾಗಲಪುರದಲ್ಲಿ ಇಡಲಾಗಿತ್ತು.

ಜನಪದ ಸೇವಾ ಟ್ರಸ್ಟ್ ಸಮಾಚಾರ

ತುಮಕೂರು ಜಿಲ್ಲೆಯ "ಯುವ ಸಂವಾದ ಕೇಂದ್ರ" ಎಂಬ ಸಂಸ್ಥೆಯ ೨೫ ಸದಸ್ಯ ಯುವಕರು ಜನಪದ ಸೇವಾ ಟ್ರಸ್ಟಿನ ಕಾರ್ಯಕ್ರಮಗಳನ್ನು ತಿಳಿದುಕೊಳ್ಳಲು ಭೇಟಿಕೊಟ್ಟರು. ಅವರೆಲ್ಲರೂ ಸಾರ್ವಜನಿಕ ಕೆಲಸದಲ್ಲಿ ಆಸಕ್ತಿ ಹೊಂದಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿದವರಾಗಿದ್ದಾರೆ. ಈ ತಂಡದ ನೇತೃತ್ವವನ್ನು ಜ್ಞಾನ ಸಿಂಧೂ ಸ್ವಾಮಿಯವರು ವಹಿಸಿದ್ದರು.

ನಬಾರ್ಡ್ ಸಂಸ್ಥೆಯ ಮೇಲುಕೋಟೆ ವಿಭಾಗದ ಅಧಿಕಾರಿಯವರಾದ ಸುಧೀರ್ ರವರು ಟ್ರಸ್ಟಿಗೆ ಭೇಟಿಕೊಟ್ಟಿದ್ದರು. ಅವರೊಂದಿಗೆ ವಿಕಸನ ಸಂಸ್ಥೆಯ ಮುಖ್ಯಸ್ಥರಾದ ಮಹೇಶ್‌ಚಂದ್ರಗುರು ಇದ್ದರು.

ಜಿಲ್ಲಾ ಸಾಂಖ್ಯಿಕ ಇಲಾಖೆ ಮಂಡ್ಯದಿಂದ ಶ್ರೀ ಪದ್ಮಶೇಖರ್ ಪಾಂಡೆ (ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ). ಶ್ರೀಮತಿ ಸೌಮಿತ್ರ (ಸಹಾಯಕ ನಿರ್ದೇಶಕರು) ಸಂಸ್ಥೆಗೆ ಭೇಟಿ ನೀಡಿದರು.

* * *

ಜೂನ್ ೨೩ಕ್ಕೆ ಗಿರಿಜ ಕೌಲಗಿ ನಿಧನವಾಗಿ ಒಂದು ವರ್ಷವಾಯಿತು. ಅವರನ್ನು ಸದಾ ನೆನಪಿನಲ್ಲಿಟ್ಟುಕೊಂಡೇ ಟ್ರಸ್ಟಿನ ಇಡೀ ವರ್ಷದ ಕೆಲಸಗಳು ನಡೆದವು. ಅವರ ಇಲ್ಲದಿರುವಿಕೆ ಹಲವಾರು ಸಂದರ್ಭಗಳಲ್ಲಿ ಬಾಧಿಸುತ್ತಿತ್ತು. ಜೂನ್ ೨೩ ರಂದು ಹೊಸ ಜೀವನ ದಾರಿ ಕೇಂದ್ರದಲ್ಲಿ ನಡೆದ ಅವರ ಅಂತ್ಯಸಂಸ್ಕಾರದ ಸ್ಥಳಕ್ಕೆ ಭೇಟಿ ಕೊಟ್ಟು ನಮನ ಸಲ್ಲಿಸಲಾಯಿತು.

* * *

ಖಾದಿ ಕೇಂದ್ರದಲ್ಲಿ ಕೆಲಸ ಮಾಡಲು ಕೆಲವು ಹೊಸ ಯುವಕರು ಬಂದಿದ್ದಾರೆ. ಅವರು ಉತ್ಸಾಹದಿಂದ ನೇಯ್ಗೆ ಮಾಡುವುದನ್ನು ಕಲಿಯುತ್ತಿದ್ದಾರೆ.

* * *

ಜನಪದ ಸೇವಾ ಟ್ರಸ್ಟಿನ ಆಡಳಿತ ಮಂಡಳಿಯ ಸಭೆ ಅಧ್ಯಕ್ಷರಾದ ಶ್ರೀ ಜನಾರ್ಧನ್‌ರವರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ನಡೆಯಿತು. ಹಿಂದಿನ ಸಭೆಯ ನಡುವಳಿಕೆಗಳ ಬಗ್ಗೆ ಮತ್ತು ೨೦೧೫–೨೦೧೬ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರಗಳ ಪರಿಶೀಲನೆ ಹಾಗೂ ೨೦೧೬–೨೦೧೭ನೇ ಸಾಲಿನ ತಾತ್ಕಾಲಿಕ ಜಮಾ ಖರ್ಚು ತಃಖ್ತೆ ಪರಿಶೀಲನೆ ಇತ್ಯಾದಿಗಳು ಸಭೆಯ ಕಾರ್ಯ ಕಲಾಪಗಳಾಗಿದ್ದವು.

ಮುಸ್ಸಂಜೆಯ ಬೆಳಕಿನಲ್ಲಿ.....೮

- ಸುರೇಂದ್ರ ಕೌಲಗಿ

ಮುಸ್ಸಂಜೆಯ ವಯೋಮಾನದಲ್ಲಿರುವ ವ್ಯಕ್ತಿಯ ದೃಷ್ಟಿ ಮಂದವಾಗುತ್ತಿರುತ್ತದೆ. ಕೇಳುವ ಶಕ್ತಿ ಕುಂಠಿತವಾಗಿರುತ್ತದೆ. ಕೈ ಕಾಲುಗಳ ಶಕ್ತಿಯು ಕುಂದುತ್ತಿರುತ್ತದೆ. ಆದ್ದರಿಂದ ಅವನಿಗೆ ದೂರದಲ್ಲಿರುವ ಪದಾರ್ಥ ಗೋಚರಿಸುವುದಿಲ್ಲ. ವಿಷಯ ಕೇಳಿಸುವುದಿಲ್ಲ. ಅವನ ಸುತ್ತಲ ಪ್ರಪಂಚದ ವರ್ತುಲ ಕಿರಿದಾಗುತ್ತಾ ಹೋಗುತ್ತದೆ. ಆದ್ದರಿಂದ ಅವನು ತನ್ನ ಈಗಿನ ಜೀವನಾನುಭವ ದಾಖಲಿಸುವುದಾದರೆ ಅದು ಅವನ ಸೀಮಿತ ವರ್ತುಲಕ್ಕೆ ಸಂಬಂಧಿಸಿದ ವಿಷಯಗಳೇ ಇರುವುದು ಸಹಜ. ಆದ್ದರಿಂದ ಮುಸ್ಸಂಜೆಯ ಬೆಳಕಿನಲ್ಲಿಯ ಮಾತುಗಳಲ್ಲಿ ಕೆಲವು ಸಾಂಸರಿಕ ಸಂಗತಿಗಳು ಬಂದರೆ ಅದು ಸಹಜ ವಿಷಯವೆಂದು ಭಾವಿಸಬೇಕೆ ಹೊರತು ಸ್ವಪ್ರಶಂಸೆಯ ಮಾತೆಂದು ಪರಿಭಾವಿಸಬಾರದು.

ಇತ್ತೀಚೆಗೆ ಸುಮಾರು ಇಪ್ಪತ್ತು ಜನ ಸಾಹಿತ್ಯಾಭಿಮಾನಿ ಹಿರಿಯರೊಂದಿಗೆ ಎರಡು ಮೂರು ಗಂಟೆಗಳ ಕಾಲಕಳೆಯುವ ಅವಕಾಶ ಬಂದಿತು. ಹಿರಿಯಲ್ಲಿರುವ ಸಾಹಿತ್ಯಾಸಕ್ತಿ ನೋಡುವ ಮತ್ತು ಕೇಳುವ ಅವಕಾಶ ತನ್ಮೂಲಕ ದೊರೆಯಿತು. ಮೈಸೂರು ನಗರದ ಕೆಲವು ಹಿರಿಯರು ಸೇರಿ ಪ್ರತಿ ತಿಂಗಳು ಒಬ್ಬರ ಮನೆಯಲ್ಲಿ ಸೇರಿ ನಡೆಸುವ ಸಾಹಿತ್ಯ ಸೇವೆಯೇ "ಸಾಹಿತ್ಯ ದಾಸೋಹ" ಇದುವರೆಗೆ ಕಳೆದ ಹಲವಾರು ತಿಂಗಳುಗಳಿಂದ ದಾಸೋಹ ನಡೆಯುತ್ತಾ ಬಂದಿದೆ. ಅಂಥದೊಂದು ಸಾಹಿತ್ಯದಾಸೋಹ ಮೇಲುಕೋಟೆಯಲ್ಲಿ ನಡೆಯಿತು. ಆ ಸಾಹಿತ್ಯ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಬೇಕೆಂದು ಅವರೆಲ್ಲರೂ ಬಯಸಿದ್ದರಿಂದ ನಾನು ಅಲ್ಲಿಗೆ ಹೋದೆ. ಅದರಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬ ಹಿರಿಯರು ತಾವು ಬರೆದ ಕಥೆ ಅಥವಾ ಕವನವನ್ನು ವಾಚಿಸುತ್ತಿದ್ದರು. ಅವೆಲ್ಲವೂ ಅನುಭವ ಪೂರ್ಣವಾಗಿದ್ದವು. ಭಾಗಿಯಾಗಿದ್ದ ಶ್ರೀ ಭಟ್ ವಯಸ್ಸಿನಲ್ಲಿ ಹಿರಿಯರಾಗಿರುವುದರ ಜೊತೆಗೆ ಅವರಿಗೆ ಒಂದು ಕಣ್ಣಿನ ತೊಂದರೆಯೂ ಇದೆ. ಆದರೂ ಕೂಡ ಅವರು ತಾವು ಬರೆದ ಕವನವನ್ನು ಆಸಕ್ತಿ ಮತ್ತು ಶ್ರದ್ಧೆ ಮತ್ತು ಆತ್ಮವಿಶ್ವಾಸದಿಂದ ಓದಿದರು. ಜನಪದ ವಿಚಾರದ ಈ ಸಂಚಿಕೆಯಲ್ಲಿ ಸಾಹಿತ್ಯ ದಾಸೋಹದಲ್ಲಿ ವಾಚಿಸಲ್ಪಟ್ಟಿದ್ದ ಕೆಲವು ಕವನ ಮತ್ತು ಚಿಂತನೆಗಳನ್ನು ಪ್ರಕಟಿಸಲು ಸಂತೋಷವೆನಿಸುತ್ತದೆ.

***

ನನಗೆ ಅತ್ಯಂತ ಪ್ರಿಯವಾದ ಹೋರಾಟದ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ಅದು ಮದ್ಯಪಾನ ನಿಷೇಧದ ಬೇಡಿಕೆಗಾಗಿ ಒತ್ತಾಯಿಸುವ ವಿವಿಧ ಸಂಘಟನೆಗಳು ಆಯೋಜಿಸಿದ್ದ ಪ್ರತಿಭಟನಾ ಜಾಥಾದ ಉದ್ಘಾಟನೆಯ ಸಮಾರಂಭ. ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಮರಳಿಗ ಎಂಬ ಗ್ರಾಮದಲ್ಲಿ ಮದ್ಯದ ಅಂಗಡಿಯ ಪ್ರಾರಂಭಕ್ಕೆ ವಿರೋಧಿಸಿ ಪ್ರತಿಭಟನೆಯೊಂದು ನಡೆಯಿತು. ಅದೇ ಸಮಯದಲ್ಲಿ ಲಂಚಮುಕ್ತ ಕರ್ನಾಟಕ ವೇದಿಕೆ ನಿರ್ಮಾಣವೆಂಬ ಪಕ್ಷಾತೀತ ಸಂಘಟನೆಯೊಂದು ಮುಂದೆ ಬಂದು ಮಂಡ್ಯದ ಬಳಿ ಇರುವ ಶಿವಪುರ ಸತ್ಯಾಗ್ರಹ ಸೌಧದಿಂದ ಆದಿಚುಂಚನಗಿರಿ ಕ್ಷೇತ್ರದವರೆಗೆ ಜಾಥಾ ಒಂದನ್ನು ಹೊರಡಿಸಿತು. ಇದರ ಸಂಘಟನೆಯಲ್ಲಿ ವಿವಿಧ ಜನಾಂದೋಲನಗಳ ಸಂಘಟಕರು ಸೇರಿಕೊಂಡಿದ್ದರು. ಈ ಜಾಥಾ ೯೨ ಕಿ.ಲೋ.ಮೀ ದೂರ ಕ್ರಮಿಸಿ ಆದಿಚುಂಚನಗಿರಿ ಕ್ಷೇತ್ರದಲ್ಲಿ ಜೂನ್ ಐದರಂದು ಕೊನೆಗೊಂಡರೂ ಜಾಥಾದ ಮುಕ್ತಾಯ ಸಮಾರಂಭ ನೆರವೇರಬಹುದು. ಜಾಥಾದಲ್ಲಿ ಭಾಗವಹಿಸಬೇಕೆಂಬ ಇಚ್ಛೆ ಉತ್ಕಟವಾಗಿದ್ದರೂ ಶಾರೀರಿಕ ದೌರ್ಬಲ್ಯದ ಕಾರಣದಿಂದ ಭಾಗವಹಿಸಲಾಗುತ್ತಿಲ್ಲವಾದುದಕ್ಕೆ ವಿಷಾದವೆನಿಸಿತು. ಆದರೆ ಜಾಥಾದಲ್ಲಿ ಭಾಗವಹಿಸಿದ್ದ ಯುವಕರನ್ನು ನೋಡಿ ಸಂತೋಷವಾಯಿತು. ಆ ಯುವಕರಲ್ಲಿಯೇ ನನ್ನನ್ನು ಕಂಡು ಸಮಾಧಾನ ಪಟ್ಟುಕೊಂಡೆ ರಾಜ್ಯದಲ್ಲಿ ಮದ್ಯಪಾನಕ್ಕಾಗಿ ಅವಕಾಶ ಇರುವುದರಿಂದ ರಾಜ್ಯಸರ್ಕಾರ ಕೊಡಮಾಡುವ ಎಲ್ಲ ಭಾಗ್ಯಗಳು ದೌರ್ಭಾಗ್ಯಗಳಾಗಿಯೇ ಪರಿಣಮಿಸುತ್ತಿವೆ! ರಾಜ್ಯದಲ್ಲಿ ಆದಷ್ಟು ಬೇಗ ಮದ್ಯಪಾನ ನಿಷೇಧ ಶಾಸನ ಜಾರಿಗೆ ಬರಲೆಂದು ಆಶಿಸುತ್ತೇನೆ.

***

ಗಿರಿಜಮ್ಮ ತೀರಿಹೋಗಿ ಒಂದು ವರ್ಷವಾಯಿತು. ಅವರ ಆತ್ಮಕ್ಕೆ ಶಾಂತಿ ಕೋರುವುದಕ್ಕಾಗಿ ಸಂಪ್ರದಾಯ ರೀತಿಯಲ್ಲಿ ಚಿಕ್ಕ ಕಾರ್ಯಕ್ರಮವನ್ನು ನಡೆಸಲಾಯಿತು. ಆ ಸಂದರ್ಭದಲ್ಲಿ ನಮ್ಮಿರ್ವರ ಸಾಂಸರಿಕ ಜೀವನದ ನೆನಪುಗಳು ಮರುಕಳಿಸುತ್ತಿದ್ದವು. ಮನಸ್ಸಿಗೆ ತುಂಬಾ ನೋವಾಗುತ್ತಿತ್ತು. ಆದರೆ ಎಲ್ಲರಿಗೂ ಮರಣ ನಿಶ್ಚಿತವಿರುವುದರಿಂದ ಅದನ್ನು ಸಮಾಧಾನಕರವಾಗಿಯೇ ಸ್ವೀಕರಿಸಿದೆ. ಮೊಮ್ಮಗಳಾದ ಗೌರಿ ವಿಶೇಷವಾಗಿ ತನ್ನ ಅಜ್ಜಿಯನ್ನು ನೆನೆದು ಬಿಕ್ಕಿ ಬಿಕ್ಕಿ ಅತ್ತಳು. ಅವಳನ್ನು ಸಮಾಧಾನ ಪಡಿಸಲಾಯಿತು. ಕಾರ್ಯಕ್ರಮ ಮುಗಿದಾದ ಮೇಲೆ ಎಲ್ಲರೂ ಲೋಕಾಭಿರಾಮವಾಗಿ ಮಾತನಾಡುತ್ತಾ ಕುಳಿತಾಗ ಗೌರಿ ತಾನು ಕಲಿತ ಹಾಡುಗಳನ್ನು ಹೇಳಿದಳು. ತನ್ಮೂಲಕ ಅಜ್ಜಿಯ ಆತ್ಮಕ್ಕೆ

ಶಾಂತಿ ಕೋರಿದಳು. ಗೌರಿ ಸಂಗೀತ ಕಲಿಯಬೇಕೆಂಬ ತನ್ನ ಅಜ್ಜಿಯ ಇಚ್ಛೆಯನ್ನು ನೆರವೇರಿಸುವ ಪ್ರಯತ್ನದಲ್ಲಿರುವಂತೆ ಕಂಡಿತು.

***

ಇನ್ನೊಂದು ವಿಶೇಷ ಸಂಗತಿ ಮೊಮ್ಮಗಳಾದ ಸುಹಾಸಿನಿ ಒಂದು ವಾರದ ಮಟ್ಟಿಗೆ ಶ್ರೀಲಂಕಾಗೆ ಸಾಂಸ್ಕೃತಿಕ ಪ್ರತಿನಿಧಿಯಾಗಿ ಭೇಟಿಕೊಟ್ಟದ್ದು. ಇದೇ ಅವಳ ಮೊದಲ ವಿದೇಶಿ ಯಾತ್ರೆಯಾದುದರಿಂದ ಅವಳಿಗೆ ವಿಶೇಷ ಅನುಭವ ದೊರೆಯಿತು. ಈ ಸಂದರ್ಭವನ್ನು ಉಪಯೋಗಿಸಿ ಸುಹಾಸಿನಿಯು ಶ್ರೀಲಂಕಾದ ಹಿರಿಯ ಗಾಂಧೀ ವಿಚಾರ ಪ್ರೇಮಿಯಾದ ಮತ್ತು ಸರ್ವೋದಯ ನಾಯಕರಾದ ಶ್ರೀ ಎ.ಟಿ. ಶ್ರೀ ಅರಿಯರತ್ನೆಯವರನ್ನು ಭೇಟಿ ಮಾಡಿದಳು. ನಾನು ಅವರಿಗೆ ಕರ್ನಾಟಕ ಸರ್ವೋದಯ ಕಾರ್ಯಕರ್ತರ ಪರವಾಗಿ ಶುಭಾಶಯ ಕಳುಹಿಸಿದ್ದೆ. ಶ್ರೀ ಅರಿಯರತ್ನೆಯವರು ತಮ್ಮ ಮೈತ್ರಿಯ ಕುರುಹಾಗಿ ತಮ್ಮ ಆತ್ಮಕಥೆಯ ಎರಡು ಸಂಪುಟಗಳನ್ನು ಮತ್ತು ತಾವು ನಡೆಸಿದ ಸರ್ವೋದಯ ಶ್ರಮದಾನ ಚಳುವಳಿಯ ಬಗ್ಗೆ ಗುಣದಾಸ್ ಲಿಯಾನ್‌ಗೆ ಅವರು ಬರೆದಿರುವ ಪುಸ್ತಕಗಳನ್ನು ಸ್ವಹಸ್ತಾಕ್ಷರದಲ್ಲಿ ಬರೆದ ಶುಭಾಶಯದೊಂದಿಗೆ ಕಳುಹಿಸಿದ್ದಾರೆ. ಶ್ರೀ ಅರಿಯರತ್ನೆ ತೋರಿಸಿರುವ ಈ ಗೌರವಕ್ಕಾಗಿ ಅವರಿಗೆ ಆಭಾರಿಯಾಗಿದ್ದೇನೆ. ಈ ಪುಸ್ತಕಗಳನ್ನು ಓದಬೇಕು ಅಷ್ಟೇ.

ಸಾದರ – ಸ್ವೀಕಾರ

ಪುಸ್ತಕದ ಹೆಸರು – ಸಾಹಿತ್ಯ ಪರಿಚಾರಕ
(ಜೆ.ಪಿ. ರಾಜರತ್ನಂ ಕುರಿತು ಒಂದು ನುಡಿ ಚಿತ್ರ)

ಲೇಖಕ – ಎಸ್. ಚೆನ್ನಪ್ಪ

ಪ್ರಕಾಶಕರು – ಅರ್ಕಾವತಿ ಪ್ರಕಾಶನ ಮೈಸೂರು–೯

ಬೆಲೆ – ೧೫ರೂ

ಮುದ್ರಣ – ನಾಲ್ಕನೇ ಮುದ್ರಣ

ವಯಸ್ಕರ ಶಿಕ್ಷಣ ಸಮಿತಿಯ "ಪುಸ್ತಕ ಪ್ರಪಂಚದಲ್ಲಿ' ಬರೆದ ಲೇಖನ ರಾಜರತ್ನಂ ಅವರ ಸಾಹಿತ್ಯ ಸಾಧನೆಗಳ ಪರಿಚಯ ಇಲ್ಲಿದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ಸೂರ್ಯನಾರಾಯಣ – ಶಿವಮೊಗ್ಗ

ಶ್ರೀ ರವಿಕುಮಾರ ಯು.ಎನ್ – ಮೈಸೂರು

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ ಗಜಾನನ ಈಶ್ವರ ಹೆಗಡೆ – ಮೈಸೂರು

ಶ್ರೀ ಕನ್ನಂಬಾಡಿ ಶಿವಶಂಕರ್ – ಮೈಸೂರು

ಶ್ರೀ ಎಸ್. ಆರ್. ಪಾರ್ಥಸಾರಥಿ – ಮೈಸೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ"

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ. ಪತ್ರಿಕೆಯಲ್ಲಿಯ ಲೇಖನಗಳ ಬಗ್ಗೆ ಅಭಿಪ್ರಾಯ ಮತ್ತು ಟೀಕೆ–ಟಿಪ್ಪಣಿಗಳನ್ನು ತಿಳಿಸಬೇಕಾಗಿ ವಿನಂತಿ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ಚಂದಾದಾರರಲ್ಲಿ ವಿನಂತಿ:–

"ಜನಪದ ವಿಚಾರ" ಪ್ರತಿ ತಿಂಗಳು ೩೦ನೇ ತಾರೀಖು ಅಂಚೆಗೆ ಹೋಗುತ್ತದೆ. ತಿಂಗಳ ಒಂದು ವಾರದಲ್ಲಿ ಪತ್ರಿಕೆ ತಲುಪದಿದ್ದರೆ ಕೂಡಲೆ ತಿಳಿಸಿ –೯೧೪೧೭೦೦೮೧೨

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237